# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಮಾರ್ಚ್ 26, 2022

ಸಂಪುಟ : 48 ಸಂಚಿಕೆ : 315 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com







# ಕೋವಿಡ್ ನಡುವೆಯೂ ಆದಾಯ

## 27 ಸಾವಿರ ಕೋಟಿ ರೂ. ಹೆಚ್ಚು ಸಂಪನ್ಮೂಲ ಕ್ರೋಢೀಕರಣ

ಬೆಂಗಳೂರು, ಮಾ. 25 - ಕೋವಿಡ್‌ನಿಂದ ರಾಜ್ಯ ಬೊಕ್ಕಸಕ್ಕೆ ಆದಾಯದ ಕೊರತೆಯಾಗಬಹುದು ಎಂಬ ನಿರೀಕ್ಷೆಗಳನ್ನು ಹುಸಿ ಮಾಡಿ, 27 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಸಂಪನ್ಮೂಲ ಕ್ರೋಢೀಕರಣವಾಗಿದ್ದು, ವೆಚ್ಚ ಮಾಡಲು ರಾಜ್ಯ ಸರ್ಕಾರ ಪೂರಕ ಬಜೆಟ್ ಮಂಡನೆ ಮಾಡಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ವಿಧಾನಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಪೂರಕ ಅಂದಾಜಿನ ಧನ ವಿಧೇಯಕವನ್ನು ಸಚಿವರು ಮಂಡನೆ ಮಾಡಿದರು. ಇದಕ್ಕೆ ಆಕ್ಷೇಪ

**ತೆರಿಗೆ ಇಲಾಖೆಗಳು ದಕ್ಷತೆಯಿಂದ ಕೆಲಸ ಮಾಡಿ, ನಿರೀಕ್ಷೆಗಿಂತ ಶೇ.10ರಷ್ಟು ಅಂದರೆ 10 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಸಂಪನ್ಮೂಲ ಸಂಗ್ರಹ ಮಾಡಿವೆ.**

**- ಜೆ.ಸಿ.ಮಾಧುಸ್ವಾಮಿ, ಸಚಿವ**

ವ್ಯಕ್ತಪಡಿಸಿದ ಪ್ರತಿಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಧನ ವಿಧೇಯಕವನ್ನು ಅಂಗೀಕರಿಸುವುದು ಅನಿವಾರ್ಯ. ಆದರೆ ಗಂಭೀರ ವಿಚಾರವಾದ ಈ ವಿಧೇಯಕ ಕುರಿತು ಕಾರ್ಯ ಕಲಾಪ ಪಟ್ಟಿಯಲ್ಲಿ ನಮೂದಾಗಬೇಕಿತ್ತು. ಮುಖ್ಯಮಂತ್ರಿಯವರೇ ಖುದ್ದು ಮಂಡನೆ ಮಾಡಬೇಕಿತ್ತು. ಪೂರ್ವ ಮಾಹಿತಿ ಇಲ್ಲದೇ ಏಕಾಏಕಿ ಮಂಡನೆ ಮಾಡುವ ಕೆಟ್ಟ ಸಂಪ್ರದಾಯ ನಡೆಯಬಾರದಿತ್ತು ಎಂದರು. ಇದಕ್ಕೆ ಜೆಡಿಎಸ್‌ನ ಮರಿತಿಬ್ಬೇಗೌಡ ಇದಕ್ಕೆ ಧ್ವನಿಗೂಡಿಸಿದರು.

ಮಾಧುಸ್ವಾಮಿ ವಿಧೇಯಕದ ಬಗ್ಗೆ ವಿವರಣೆ ನೀಡಿ, ಈ ವರ್ಷ ಭಾರೀ ಗಾತ್ರದ ಪೂರಕ ಬಜೆಟ್ ಆಗಿದೆ, ಅದು ಸಕಾರಾತ್ಮಕ ಬೆಳವಣಿಗೆಯಾಗಿದೆ, ಕೋವಿಡ್‌ನಿಂದ ಆದಾಯ ಕೊರತೆಯಾಗಲಿದೆ ಎಂಬ ಆತಂಕದಲ್ಲಿದ್ದೆವು. ಕೋವಿಡೋತ್ತರದಲ್ಲಿ ತೆರಿಗೆ ಸಂಗ್ರಹದಲ್ಲಿ ಏರಿಕೆ (3ನೇ ಪುಟಕ್ಕೆ)

## ಶುಲ್ಕ ಬಾಕಿ ಇದ್ದರೂ ಹಾಲ್‌ಟಿಕೆಟ್ ನಿರಾಕರಿಸುವಂತಿಲ್ಲ

ಬೆಂಗಳೂರು, ಮಾ. 25 - ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿ ಶುಲ್ಕ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಹಾಲ್ ಟಿಕೆಟ್ (ಪ್ರವೇಶ ಪತ್ರ) ನಿರಾಕರಿಸದಂತೆ ಅಧಿಕಾರಿಗಳ ಮೂಲಕ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ. ಶೂನ್ಯ ವೇಳೆಯಲ್ಲಿ ಮಂಜುನಾಥ್ ಅವರು ಪ್ರಸ್ತಾಪಿಸಿದ (2ನೇ ಪುಟಕ್ಕೆ)

## ಹರಿಹರ ನಗರಸಭೆ ಅಧ್ಯಕ್ಷರಾಗಿ ಷಾಹಿನಾಬಾನು



ಹರಿಹರ, ಮಾ. 25 - ನಗರಸಭೆಯ ಅಧ್ಯಕ್ಷರಾಗಿ ಷಾಹಿನಾ ಬಾನು ದಾದಾ ಪೀರ್ ಭಾನುವಳ್ಳಿ ಹಾಗೂ ಉಪಾಧ್ಯಕ್ಷರಾಗಿ ಎ. ವಾಮನಮೂರ್ತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಉಪವಿಭಾಗಾಧಿಕಾರಿ ಮಮತಾ ಹೊಸಗೌಡ್ರು ತಿಳಿಸಿದ್ದಾರೆ.

ನಗರಸಭೆಯ ಅಧ್ಯಕ್ಷರಾಗಿದ್ದ ರತ್ನ ಡಿ. ಉಜ್ಜೇಶ್ ಮತ್ತು ಉಪಾಧ್ಯಕ್ಷ (2ನೇ ಪುಟಕ್ಕೆ)

## ರಾಜೀವ್ ವಿವಿಗೆ ಡಾ|| ಪ್ರಸಾದ್



ದಾವಣಗೆರೆ, ಮಾ.25- ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಶೈಕ್ಷಣಿಕ ಮಂಡಳಿಯ ಸದಸ್ಯರನ್ನಾಗಿ ನಗರದ ಎಸ್. ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಪ್ರಾಂಶುಪಾಲ ಡಾ|| ಬಿ. ಎಸ್. ಪ್ರಸಾದ್ ಅವರನ್ನು (3ನೇ ಪುಟಕ್ಕೆ)


GPSTR(6-8)
ಉಚಿತ ಕಾರ್ಯಾಗಾರ-27-3-2022
ಡಾ|| ಹೆಚ್.ವಿ. ವಾಮದೇವಪ್ಪರವರಿಂದ
ಬ್ಯಾಚ್ 1 27-03-2022
ಬ್ಯಾಚ್ 2 04-04-2022
ಬ್ಯಾಚ್ 3 11-04-2022
ವಿಷಯ : English, Science, Social
ಧಾರವಾಡ ಮತ್ತು ಬೆಂಗಳೂರಿನ ಉಪನ್ಯಾಸಕರು
KAS, PSI, POLICE
WINNERS CAREER ACADEMY
COACHING CENTRE FOR ALL EXAMS
Near Stadium, P.J. Extn., Davangere
9986520992, 9886997892







|| ಶ್ರೀ ಮರುಳಸಿದ್ಧೇಶ್ವರ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ



ಜನನ: 1936

ಲಿಂಗೈಕ್ಯ: 19.03.2022

ದಾವಣಗೆರೆ ನಗರ ಬಸವಾಪುರ ಗ್ರಾಮದ ವಾಸಿ ಶ್ರೀ ದಿ|| ಟಿ. ಹನುಮಂತಪ್ಪನವರ ಮಗನಾದ ಶ್ರೀ ಟಿ. ರೇವಣಸಿದ್ದಪ್ಪ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು.
ದಿನಾಂಕ 19.03.2022ನೇ ಶನಿವಾರ ಬೆಳಿಗ್ಗೆ 8.ಕ್ಕೆ ನನ್ನ ಪೂಜ್ಯ ತಾಯಿಯವರಾದ

**ಶ್ರೀಮತಿ ತೌಡೂರು ರುದ್ರಮ್ಮನವರು**

(ದಿ|| ಟಿ. ಹನುಮಂತಪ್ಪನವರ ಧರ್ಮಪತ್ನಿ)

ಶಿವಾಧೀನರಾದ ಪ್ರಯುಕ್ತ ಲಿಂಗೈಕ್ಯರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 27.03.2022ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ನಗರ ಬಸಾಪುರ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ದಿ|| ಟಿ. ಹನುಮಂತಪ್ಪನವರ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಮತ್ತು ತೌಡೂರು ವಂಶಸ್ಥರು ಬಸಾಪುರ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

ಬಸಾಪುರ ಟಿ. ಹನುಮಂತಪ್ಪ ಅಂಡ್ ಸನ್ಸ್
ಎ.ಪಿ.ಎಂ.ಸಿ. ದಾವಣಗೆರೆ. ಮೊ: 99020 98350, 94489 24115

|| ಶ್ರೀ ಹುಚ್ಚಿಂಗೆಲ್ಲದೇವಿ ಪ್ರಸನ್ನ ||

### ಕೈಲಾಸ ಸಮಾರಾಧನೆಯ ಆಹ್ವಾನ ಪತ್ರಿಕೆ



ಜನನ: 29.08.1962 ನಿಧನ: 14.03.2022

ದಾವಣಗೆರೆ ವಾಸಿ ದಿ|| ಶ್ರೀಮತಿ ಬಿ.ಜಿ. ಟೀಕಾಂಬ ದಿ|| ಬಿ.ಭೀಮಪ್ಪ ಇವರ ಮಕ್ಕಳಾದ ಶ್ರೀ ಬಿ. ವಸಂತಕುಮಾರ್ ಹಾಗೂ ಸಹೋದರರು, ಸಹೋದರಿ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 14.03.2022ರ ಸೋಮವಾರ ಸಂಜೆ 6.45ಕ್ಕೆ ನಮ್ಮ ಸಹೋದರನಾದ

**ಶ್ರೀ ಬಿ. ಮೃತ್ಯುಂಜಯ**

(ಸಾರಿಗೆ ವ್ಯವಸ್ಥಾಪಕರು, ಆರೋಗ್ಯ ಇಲಾಖೆ, ಬೆಂಗಳೂರು)

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಸಮಾರಾಧನೆಯನ್ನು ದಿನಾಂಕ 26.03.2022 ರ ಶನಿವಾರ ಬೆಳಿಗ್ಗೆ 11.45ಕ್ಕೆ ಮೃತರ ಸ್ವಗೃಹ, ಪಿ.ಜೆ. ಬಡಾವಣೆ, ಪಿ.ಜೆ. ಲಾಡ್ಜ್ ಪಕ್ಕದ ಆವರಣ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:
ಶ್ರೀ ಬಿ. ವಸಂತಕುಮಾರ್ ಹಾಗೂ ಸಹೋದರರು, ಸಹೋದರಿ ಮೃತರ ಧರ್ಮಪತ್ನಿ ಶ್ರೀಮತಿ ಪುಷ್ಪ ಮತ್ತು ಮಕ್ಕಳು, ಬುಳ್ಳಾವರ ವಂಶಸ್ಥರು ಹಾಗೂ ಬಂಧು ಮಿತ್ರರು.
ಮೊ: 99725 61396

ಶ್ರೀ ಆನೆಕೊಂಡದ ಬಸವೇಶ್ವರ ಪ್ರಸನ್ನ

### ಕೈಲಾಸ ಶಿವಗಣಾರಾಧನೆ ಆಹ್ವಾನ

ದಾವಣಗೆರೆ ತಾಲ್ಲೂಕು ಹೊಸ ಕಡ್ಲೆಬಾಳು ಗ್ರಾಮದ ವಾಸಿ ಶ್ರೀಮತಿ ದಾಕ್ಷಾಯಣಮ್ಮ ಶ್ರೀ ಈರಪ್ಪ ಆನೆಕೊಂಡದ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 18.03.2022ನೇ ಶುಕ್ರವಾರ ಸಂಜೆ 4.40 ಕ್ಕೆ ನಮ್ಮ ಪೂಜ್ಯ ತಾಯಿಯವರಾದ



**ಶ್ರೀಮತಿ ಆನೆಕೊಂಡದ ಕೆಂಚಮ್ಮ**

(ದಿ|| ಶ್ರೀ ಆನೆಕೊಂಡದ ಬಸಪ್ಪನವರ ಧರ್ಮಪತ್ನಿ)

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 26.03.2022ನೇ ಶನಿವಾರ ಬೆಳಿಗ್ಗೆ 10.30ಕ್ಕೆ ಹೊಸ ಕಡ್ಲೆಬಾಳು ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು :
ಶ್ರೀಮತಿ ದಾಕ್ಷಾಯಣಮ್ಮ ಶ್ರೀ ಎ.ಬಿ. ಈರಪ್ಪ
ಶ್ರೀಮತಿ ಸುಲೋಚನ ಶ್ರೀ ಎ.ಬಿ. ಬಸವರಾಜಪ್ಪ
ಶ್ರೀಮತಿ ರೂಪ ಶ್ರೀ ಎ.ಬಿ. ಪ್ರಭಾಕರ
ಶ್ರೀಮತಿ ಶಿಲ್ಪ ಶ್ರೀ ಎ.ಬಿ.ಜಗದೀಶ್ ಮತ್ತು
ಮೊಮ್ಮಕ್ಕಳು, ಆನೆಕೊಂಡದ ವಂಶಸ್ಥರು,
ಹೊಸ ಕಡ್ಲೆಬಾಳು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
ಮೊಬೈಲ್ : 99016-69673

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಬಿ. ಶೇಖರಪ್ಪ ಬೆಳಕೆರೆ ನಿಧನ



ದಾವಣಗೆರೆ ನಿವಾಸಿಯಾದ

**ಶ್ರೀ ಬಿ. ಶೇಖರಪ್ಪ ಬೆಳಕೆರೆ**

ಅವರು, ದಿನಾಂಕ : 25.03.2022ರ ಶುಕ್ರವಾರ ಬೆಳಗ್ಗೆ 12.05ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ದೇಹವನ್ನು ದಿನಾಂಕ : 26.03.2022ರ ಬೆಳಿಗ್ಗೆ 8.00 ಗಂಟೆಯವರೆಗೆ ದಾವಣಗೆರೆ ವಿದ್ಯಾನಗರದ ಮುಖ್ಯ ರಸ್ತೆಯ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನದ ನಂತರ ಬೆಳಗ್ಗೆ 9.00 ರ ನಂತರ ಹರಿಹರದ ಹಳ್ಳದಕೇರಿಯ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನದ ನಂತರ 11.00 ಗಂಟೆಗೆ ಹರಿಹರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತರು : ಶ್ರೀಮತಿ ಸುಪ್ರಿಯಾ ಗಿರೀಶ್ ಬೆಳಕೆರೆ, ದಾವಣಗೆರೆ.
ಶ್ರೀಮತಿ ಜಿ. ಲೀಲಾ ಜಿ. ರಾಜಪ್ಪ, ಬೆಂಗಳೂರು.
ಶ್ರೀಮತಿ ಸುನಿತ ಮಲ್ಲಿಕಾರ್ಜುನ್, ಬೆಂಗಳೂರು.
ಗೌಡ್ರ ಗುರುಸಿದ್ದಪ್ಪರ ವಂಶಸ್ಥರು ಹಳ್ಳದಕೇರಿ, ಹರಿಹರ.
ಹಾಗೂ ಬಂಧು-ಮಿತ್ರರು. ಫೋನ್ : 80738 73603

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x74 ಪೂರ್ವ, 30x45 ಪಶ್ಚಿಮ 30x50 ಪೂರ್ವ-ದಕ್ಷಿಣ ಕಾರ್ನರ್ ಬಾಲಾಜಿ ಬಡಾವಣೆಯಲ್ಲಿ 30x55 ಉತ್ತರ-ಪೂರ್ವ ಕಾರ್ನರ್. ನಿಜಲಿಂಗಪ್ಪ ಬಡಾವಣೆಯಲ್ಲಿ 30x30 ಪಶ್ಚಿಮ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮನೆಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆ (ತರಳಬಾಳು ಕೃಷಿ ಕೇಂದ್ರ ಪಕ್ಕ) ದಕ್ಷಿಣ 30x50, ಕೆಳಗೆ 3BHK ಮೇಲೆ 3BHK ಅದರ ಮೇಲೆ ಸಿಂಗಲ್ BHK ಮತ್ತು ರೂಂ, ಎಸ್.ಎಸ್. 'ಬಿ'ಬ್ಲಾಕ್ (ಶಾರದಾಂಬ ಕಲ್ಯಾಣ ಮಂಟಪದ ಹತ್ತಿರ) ಪಶ್ಚಿಮ 40x70 ಕೆಳಗೆ 3BHK ಮೇಲೆ 1 BHK. ಸೈಟು ಮತ್ತು ಮನೆಗಳಿಗೆ ಬ್ಯಾಂಕ್ ಲೋನ್ ಮಾಡಿಸಿಕೊಡಲಾಗುತ್ತದೆ.
ಐಗೂರು ವಿಜಯಕುಮಾರ್
99457 02495

**ಮಹಿಳೆ ಬೇಕಾಗಿದ್ದಾರೆ**
ಮನೆ ಕೆಲಸ ಮಾಡುವುದರೊಂದಿಗೆ ಮಗುವನ್ನು ನೋಡಿಕೊಳ್ಳಲು 40 ವರ್ಷದೊಳಗಿನ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
96201-64304

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**ಹಿಟ್ಟಿನ ಗಿರಣಿ ಬಾಡಿಗೆಗಿದೆ**
ವಿದ್ಯಾನಗರ, ವಿನಾಯಕ ಬಡಾವಣೆ, 20 ನೇ ಕ್ರಾಸ್‌ನಲ್ಲಿರುವ 24 K.V ವಿದ್ಯುತ್ ಸಂಪರ್ಕ ವಿರುವ ರಾಗಿ, ಜೋಳ, ಗೋದಿ, ಕಾರಪುಡಿ, ಸಂಬಾರ್ ಪುಡಿ ಬೀಸುವ ಸುಸಜ್ಜಿತವಾದ ಗಿರಣಿ. 100 ಕ್ವಿಂಟಾಲ್ ಗೋಡೌನ್ ವ್ಯವಸ್ಥೆ ಇದೆ.
98441 91743,99161 06139

**FLAT FOR LEASE**
ವಿದ್ಯಾನಗರ ಕೊನೆ ಬಸ್‌ಸ್ಟಾಪ್ ನಲ್ಲಿರುವ ಅಪಾರ್ಟ್‌ಮೆಂಟ್‌ನಲ್ಲಿ 3BHK ಫ್ಲಾಟ್ ಲೀಸ್‌ಗೆ ಇದೆ. ಸಂಪರ್ಕಿಸಿ.
95913 60143

**New House for Rent**
Fully furnished New 2BHK House for Rent, 1st Floor, 2nd Floor, Opp. Indoor Stadium, Kundavada Kere Road, Davanagere.
98440 64565

**ಬೇಕಾಗಿದ್ದಾರೆ**
Call center - Girls
Accountant - Girls
Field Executive - Boys
Sri Kururvatti Basaveshwara Pharma
College Road, P.J. Extn., Davanagere
95139 15520

**ಬೇಕಾಗಿದ್ದಾರೆ**
ಸಪ್ಲೈಯರ್, ಕ್ಲೀನರ್ ಬೇಕಾಗಿದ್ದಾರೆ.
ಸಿದ್ಧಗಂಗಾ ಹೋಟೆಲ್
ದಾವಣಗೆರೆ .ಸಂಪರ್ಕಿಸಿ.
70190 73163

**WANTED**
Telecallers (F), Accoutant (M) Sales Officers (M/F), Works Manager (M), IT Technican, Software Testers /Developers
98444 92888

**ಮನೆ ಬಾಡಿಗೆಗಿವೆ**
ಶಾಮನೂರು ಪಕ್ಕ ಡಾಲರ್ಸ್ ಕಾಲೋನಿಯಲ್ಲಿ ಶಿವ ಸದನ ತಿಮ್ಮಾರೆಡ್ಡಿ ಹೈಸ್ಕೂಲ್ ಹತ್ತಿರ 1BHK, 2BHK ಮನೆ ಬಾಡಿಗೆಗೆ ಇವೆ. ಲಿಫ್ಟ್ ವ್ಯವಸ್ಥೆ ಇದೆ. ಸಂಪರ್ಕಿಸಿ
87623 12789
99722 44667

**ಮನೆ ಬಾಡಿಗೆಗೆ ಇದೆ**
2BHK ಮೊದಲನೇ ಮಹಡಿ, ಬೋರ್‌ವೆಲ್ & ಕಾರ್ಪೋರೇಷನ್ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸ್ ಬಡಾವಣೆ 'ಬಿ' ಬ್ಲಾಕ್ 1ನೇ ಮುಖ್ಯರಸ್ತೆ, 11ನೇ ಕ್ರಾಸ್ ನಂ 353 'ಸಿರಿಸಾರ' ಉತ್ತರ ದಿಕ್ಕಿಗೆ ಬಾಗಿಲಿರುವ ಮನೆ ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ
94489 63300

**ಹೊಸ ಬಿಲ್ಡಿಂಗ್ ಮಾರಾಟಕ್ಕೆ**
3 ಮನೆ, 2 ಮಳಿಗೆಗಳುಳ್ಳ 3 ಅಂತಸ್ತಿನ ಬಿಲ್ಡಿಂಗ್ (ಕಾರ್ನರ್ ಸೈಟ್ 30x30) ನಿಜಲಿಂಗಪ್ಪ ಲೇ ಔಟ್‌ನಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ :
90088 78676

**ಸೈಟುಗಳು ಮಾರಾಟಕ್ಕಿವೆ**
ಆವರಗೆರೆ ಲಕ್ಷ್ಮಣ ಲೇಔಟ್‌ನಲ್ಲಿ ಅಲಿನೇಷನ್ ಸೈಟುಗಳು ಮಾರಾಟಕ್ಕಿವೆ. 30x45 North, 30x50 South. ಸಂಪರ್ಕಿಸಿ :
99456 12842
63646 44033

**ಬೇಕಾಗಿದ್ದಾರೆ**
ಶೋ ರೂಂನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಬಳ : 10,000/-
M : 95381 87385
Tel Ph. No. 08192 261003
M : 99161 43003

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ನೆಲ ಮಳಿಗೆ ಬಾಡಿಗೆಗೆ ಇದೆ**
ಕೆ.ಟಿ.ಜೆ ನಗರದ 8ನೇ ಕ್ರಾಸ್‌ನಲ್ಲಿ 1600 ಚದರಡಿಯುಳ್ಳ ನೆಲ ಮಳಿಗೆಯು ಕಚೇರಿ ಅಥವಾ ಇನ್ನಿತರೆ ವಾಣಿಜ್ಯೋಪಯೋಗಕ್ಕೆ ಬಾಡಿಗೆಗಿದೆ.
ಸಂಪರ್ಕಿಸಿ: 94484-78786
98867-34802

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
PUC or any degree,
ವಿಳಾಸ : ಕಾವೇರಿ ಫಾರ್ಮ, ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ- 577002.

**ಉಚಿತ ಥೆರಪಿ**
15 ದಿನಗಳಲ್ಲಿ ಪರಿಹಾರ ಬಿಪಿ, ಶುಗರ್, ವೆರಿಕೋಸ್ ವೇನ್ ,ಬೆನ್ನು/ಸೊಂಟ/ಮಂಡಿ ನೋವು,ಗ್ಯಾಸ್ಟ್ರಿಕ್, ಇತರೆ ಯಾವುದೇ ಸಮಸ್ಯೆ ಗಳಿಗೆ ನೇರ ಪರಿಹಾರ.HOME DEMO ಸೌಲಭ್ಯ ವಿದೆ.T&C ಕಂಪ್ಯಾನಿಯೋ ಮೆಡಿಟೆಕ್, ಲಾಯರ್ ರೋಡ್ ದಾವಣಗೆರೆ.
86602 35013

**GST Registration**
INCOME TAX cases, Audit and for Account Maintenances
MEGHANA ASSOCIATES (R)
99809 16126

**ಮನೆ ಮಾರಾಟಕ್ಕಿದೆ**
20x30 ಅಳತೆಯ ಪೂರ್ವ ದಿಕ್ಕಿನ Final Approved Ground and First Floor ಮನೆ ಮಾರಾಟಕ್ಕಿದೆ. Near Bagiratha Circle, Davanagere.
87470 61217

**ಉಪಯೋಗಿಸಲ್ಪಟ್ಟ ಫರ್ನೀಚರ್ ಮಾರಾಟಕ್ಕಿದೆ**
ಒಂದು ಡಬಲ್ ಬೆಡ್, ಮ್ಯಾಟ್ರಿಸ್ಸ್ ಜೊತೆ, ಒಂದು ಸೋಫಾ ಕಮ್ ಬೆಡ್, ಟಿವಿ ಸ್ಟಾಂಡ್, ಡೈನಿಂಗ್ ಟೇಬಲ್, 6 ಕುರ್ಚಿಗಳ ಜೊತೆ ಮಾರಾಟಕ್ಕೆ ಇದೆ. ಕಾಲ್ ಮಾಡಿ
94483 23759, 83108 38124

**WANTED**
4 Jobs : Surveyor, Asst, Driver, Civil Diploma, male only. Below 23 years for a banglore based Co INFOGEO.in
92428 84666

# ಹೊನ್ನಾಳಿ ತಾಲ್ಲೂಕಿನಲ್ಲಿ ವಿವಿಧೆಡೆ ಮಳೆ



ಹೊನ್ನಾಳಿ, ಮಾ.25- ಗುರುವಾರ ಸಂಜೆ 5 ರಿಂದ 6 ರವರೆಗೆ ಪಟ್ಟಣ ಹಾಗೂ ತಾಲ್ಲೂಕಿನ ವಿವಿಧೆಡೆಗಳಲ್ಲಿ ಉತ್ತರಾ ಭಾದ್ರಪದ ಮಳೆ ಸುರಿಯುವ ಮೂಲಕ ಬಿಸಿಲ ಬೇಗೆಯಿಂದ ಕಂಗೆಟ್ಟಿದ್ದ ಭುವಿಗೆ ತಂಪೆರೆಯಿತು.

ಹೋಳಿ ಹುಣ್ಣಿಮೆ ಆಚರಣೆಯ ಆಸು-ಪಾಸಿನಲ್ಲಿ ಮಳೆ ಸುರಿದು ಹೋಳಿ ಧೂಳು ಅಡಗಿಸುವುದು ವಾಡಿಕೆ, ಅದರಂತೆ ಮಳೆ ಸುರಿಯಿತು.

ಬಹುತೇಕ ತಾಲ್ಲೂಕಿನ ಎಲ್ಲೆಡೆ ಮಳೆ ಸುರಿದಿದ್ದು, ಭಾರೀ ಗಾಳಿಯಿಂದಾಗಿ ಅಲ್ಲಲ್ಲಿ ವಿದ್ಯುತ್ ವ್ಯತ್ಯಯವಾಗಿತ್ತು. ಈ ಸುದ್ದಿ ತಿಳಿಯುತ್ತಿದ್ದಂತೆ, ಬಾಧಿತ ಪ್ರದೇಶಗಳಿಗೆ ಸಿಬ್ಬಂದಿಯೊಂದಿಗೆ ತೆರಳಿದ ಬೆಸ್ಕಾಂ ಕೆಪಿಟಿಸಿಎಲ್ ಎಇಇ ರವಿಕಿರಣ್ ದುರಸ್ತಿ ಕಾರ್ಯ ಕೈಗೊಂಡರು.

ಆಗ್ನೇಯ ಬಂಗಾಳ ಕೊಲ್ಲಿ ಹಾಗೂ ದಕ್ಷಿಣ ಅಂಡಮಾನ್ ಸಮುದ್ರದಲ್ಲಿ ಪ್ರಬಲ ವಾಯುಭಾರ ಕುಸಿತದ ಹಿನ್ನೆಲೆಯಲ್ಲಿ ಗುಡುಗು - ಸಿಡಿಲಿನಿಂದ ಕೂಡಿದ ಮಳೆಯಾಗುತ್ತಿದ್ದ ಬಗ್ಗೆ ವರದಿಯಾಗುತ್ತಿತ್ತು. ಶಿವಮೊಗ್ಗ, ಸಾಗರ ಭಾಗಗಳಲ್ಲಿ ಮಳೆ ಸುರಿದಿತ್ತು. ಇದೀಗ, ಗುರುವಾರ ಹೊನ್ನಾಳಿ - ನ್ಯಾಮತಿ ಭಾಗದಲ್ಲೂ ಮಳೆ ಸುರಿದಿದೆ.

# ಹಾವನೂರು ವರದಿಗೆ ಮಾತ್ರ ಸ್ಥಾನವಿದೆ



ಹರಪನಹಳ್ಳಿಯ ಹಾವನೂರು ಜಯಂತಿಯಲ್ಲಿ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ

ಹರಪನಹಳ್ಳಿ, ಮಾ.25- ದಲಿತರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದವರನ್ನು ಶೋಷಣೆಯಿಂದ ಮುಕ್ತಗೊಳಿಸಿ, ಅವರನ್ನು ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ನಿಟ್ಟಿನಲ್ಲಿ ಸಮರ್ಥ ರೀತಿಯಲ್ಲಿ ಶ್ರಮಿಸಿದ ಧೀಮಂತ ನಾಯಕ ಎಲ್.ಜಿ. ಹಾವನೂರ್‌ರವರು ಎಂದು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಹೇಳಿದರು.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ಹಾವನೂರು ಜಯಂತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ನೂತನ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಅವರಿಗೆ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ರಾಜ್ಯದಲ್ಲಿಯೇ ಮೊದಲ ಬಾರಿಗೆ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರನ್ನು ಮುಖ್ಯವಾಹಿನಿಗೆ ತರಲು ಸಾಕಷ್ಟು ಶ್ರಮಿಸಿದ್ದಾರೆ. ಹಾವನೂರು ವರದಿ ಹಿಂದುಳಿದ ವರ್ಗಗಳ ಆಯೋಗಗಳ ವರದಿಗಳಲ್ಲಿ ಮಾತ್ರಸ್ಥಾನ ಪಡೆದಿದ್ದು, ದೇವರಾಜ ಅರಸು ಅವರಿಗೆ ಸಿಕ್ಕಷ್ಟೇ ಮನ್ನಣೆ ಕಾನೂನು ಪಂಡಿತ ಎಲ್.ಜಿ. ಹಾವನೂರು ಅವರಿಗೂ ಸಿಗುವಂತಾಗಲಿ ಎಂದರು.

ಏಕಲವ್ಯ ಸಂಘರ್ಷ ಸಮಿತಿ ಅಧ್ಯಕ್ಷ ರಾಯದುರ್ಗದ ಪ್ರಕಾಶ್ ಮಾತನಾಡಿ, ಹಾವನೂರರವರು ರಾಣೇಬೆನ್ನೂರು ತಾಲ್ಲೂಕು ಅಗಡಿ ಗ್ರಾಮದಲ್ಲಿ 1925 ರಲ್ಲಿ ಜನಿಸಿ, ರಾಣೇಬೆನ್ನೂರು ಪುರಸಭೆ ಅಧ್ಯಕ್ಷರಾಗಿ, ವಕೀಲರಾಗಿ, 8 ವರ್ಷಗಳ ಕಾಲ ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾನೂನು, ಸಮಾಜ ಕಲ್ಯಾಣ ಸಚಿವರಾಗಿ, ದ.ಆಫ್ರಿಕಾ ದೇಶದ ಸಂವಿಧಾನ ರಚನಾ ಸಮಿತಿಯ ಪರಿಣಿತ ಸದಸ್ಯರಾಗಿ ಎಲ್ಲರ ಜನಮಾನಸದಲ್ಲಿ ಜೀವಂತರಾಗಿದ್ದಾರೆ ಎಂದರು.

ಯುವ ಮುಖಂಡ ಹರಿಯಮ್ಮನಹಳ್ಳಿ ಶಿವರಾಜ್, ಏಕಲವ್ಯ ಸಂಘರ್ಷ ಸಮಿತಿಯ ಉಪಾಧ್ಯಕ್ಷ ಆಲಮರಸಿಕೇರಿ ಮಂಜುನಾಥ, ಮೈದೂರು ಪರುಶುರಾಮ, ಕಾರ್ಯದರ್ಶಿ ಟಿ ಶಿವರಾಜ, ಖಜಾಂಚಿ ಹರೀಶ, ಪದಾಧಿಕಾರಿಗಳಾದ ಬಿ. ಅಂಜಿನಪ್ಪ ಮಂಜುನಾಥ, ಅರ್ಜುನ, ಮಾರುತಿ, ಕುಮಾರ್, ಗೋವಿಂದ, ಅಭಿಷೇಕ, ಪ್ರಶಾಂತ, ಸೇರಿದಂತೆ ಇತರರು ಇದ್ದರು.

# ದೇವರ ಎತ್ತುಗಳಿಗೆ ಮೇವು ಸಂಗ್ರಹ ಅಭಿಯಾನ

## ಜಗಳೂರಿನ ಮ್ಯಾಸಬೇಡ ಬುಡಕಟ್ಟು ಸಂಸ್ಕೃತಿ ಸಂರಕ್ಷಣಾ ಸಮಿತಿಯಿಂದ ಸಮರ್ಪಣೆ



ಜಗಳೂರು, ಮಾ.25- ತಾಲ್ಲೂಕಿನ ಸಿದ್ದಯ್ಯನಕೋಟೆ ಗ್ರಾಮದಲ್ಲಿ ನಾಯಕ ಪಂಗಡದ ಮ್ಯಾಸ ನಾಯಕ ಬುಡಕಟ್ಟು ಜನಾಂಗದ ದೇವರ ಎತ್ತುಗಳಿಗೆ ಮೇವು ಸಂಗ್ರಹ ಅಭಿಯಾನದ ಅಂಗವಾಗಿ, ಮೇವು ಸಂಗ್ರಹಣೆ ಮಾಡಿ ಮೊಳಕಾಲ್ಮೂರು ತಾಲ್ಲೂಕು ಕಂಪಳದೇವರಹಟ್ಟಿಯ ಶ್ರೀ ಕಂಪಳದೇವರು ಮತ್ತು ಶ್ರೀ ಪಾಪನಾಯಕ ದೇವರ ಎತ್ತುಗಳಿಗೆ ಕಳುಹಿಸಿಕೊಡಲಾಯಿತು.

ಮ್ಯಾಸಬೇಡ (ಮ್ಯಾಸನಾಯಕ) ಬುಡಕಟ್ಟು ಸಂಸ್ಕೃತಿ ಸಂರಕ್ಷಣಾ ಸಮಿತಿ ವತಿಯಿಂದ ದೇವರ ಎತ್ತುಗಳಿಗೆ ಮೇವು ಸಂಗ್ರಹ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ಈ ಅಭಿಯಾನದ ಭಾಗವಾಗಿ ಜಗಳೂರು ತಾಲ್ಲೂಕು ಸಿದ್ದಯ್ಯನಕೋಟೆ ಗ್ರಾಮದ ಎನುಮಲರು ಬೆಡಗಿನ ಶ್ರೀಮತಿ ಗೌಡ್ರು ಅಂಜಿನಮ್ಮ ಕೋಂ ಹನುಮಂತಪ್ಪ ಮತ್ತು ಎನುಮಲರು ಬೆಡಗಿನ ಶ್ರೀಮತಿ ಮುಲ್ಲಜ್ಜರ ಕರಿಯಮ್ಮ ಕೋಂ ಮುಲ್ಲಜ್ಜರ ಭೀಮಪ್ಪ ಎತ್ತುಗಳಿಗೆ ತಲಾ ಒಂದು ಲೋಡ್ ಮೇವು ನೀಡಿ ಭಕ್ತಿಯನ್ನು ಸಮರ್ಪಿಸಿದರು.

ಸಿದ್ದಯ್ಯನಕೋಟೆ ಗ್ರಾಮದ ಮುಖಂಡರಾದ ದೇವರಾಜ ಪಾಳೇಗಾರ ಮಾತನಾಡಿ, ನಮ್ಮ ಮ್ಯಾಸ ನಾಯಕ ಬುಡಕಟ್ಟಿನ ಕೆಲವು ಗುಡಿಕಟ್ಟೆಗಳ ದೇವರ ಎತ್ತುಗಳಿಗೆ ಮೇವಿನ ಕೊರತೆಯಾಗಿರುವುದು ಕಂಡುಬಂದಿದೆ. ಹಾಗಾಗಿ ಇಂದು ಎರಡು ಲೋಡ್ ಮೇವು ಸಂಗ್ರಹಿಸಲಾಯಿತು. ದೇವರ ಎತ್ತುಗಳಿಗೆ ಮೇವು ನೀಡುವುದು ಒಳ್ಳೆಯ ಕಾರ್ಯ. ಎಲ್ಲರೂ ಕೈ ಜೋಡಿಸಬೇಕೆಂದು ಹೇಳಿದರು.

ಮ್ಯಾಸ ನಾಯಕ ಬುಡಕಟ್ಟು ಸಂಸ್ಕೃತಿ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ ದೊಡ್ಡಮನಿ ಪ್ರಸಾದ್, ಹೆಚ್.ಜಿ ಲೋಕೇಶ್, ಟಿ.ಪಿ ಮಂಜುನಾಥ್ ಹಾಗೂ ಸಿದ್ದಯ್ಯನಕೋಟೆ ಗ್ರಾಮದ ಹೊಳಿಕೇರ್ ಬಸವರಾಜಪ್ಪ, ಕುಣಿಮಾದಿಹಳ್ಳಿ ಹನುಮಂತಪ್ಪ, ಮುಲ್ಲಜ್ಜರ ಭೀಮಪ್ಪ, ಓಬಪ್ಪ, ಮಾಟಪ್ಪ ರವಿ, ಜೈಹೀರಪ್ಪ, ಎನ್. ಅಂಜಿನಪ್ಪ , ಮಾರುತಿಗೌಡ, ಕೆ. ಮಧು, ಕೆ. ಗೋಣೆಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

# ಹಾಲ್‌ಟಿಕೆಟ್ ನಿರಾಕರಿಸುವಂತಿಲ್ಲ

**(1ನೇ ಪುಟದಿಂದ)** ವಿಷಯಕ್ಕೆ ಉತ್ತರಿಸಿದ ಸಚಿವರು, ಈಗಾಗಲೇ ಡಿಡಿಪಿಐ ಮತ್ತು ಬಿಇಒಗಳ ಜೊತೆ ಸಭೆ ನಡೆಸಿ, ಯಾವುದೇ ವಿದ್ಯಾರ್ಥಿಗೆ ಹಾಲ್ ಟಿಕೆಟ್ ನಿರಾಕರಿಸದಂತೆ ಸೂಚನೆ ನೀಡಲಾಗಿದೆ ಎಂದರು.

ಶುಲ್ಕ ಕಟ್ಟದೆ ಬಾಕಿ ಉಳಿಸಿಕೊಂಡಿರುವ ವಿದ್ಯಾರ್ಥಿಗಳ ಪರೀಕ್ಷೆಗೆ ತೊಂದರೆ ಮಾಡಬಾರದು ಎಂದು ಶಾಲಾ ಆಡಳಿತ ಮಂಡಳಿಗೆ ಸ್ಪಷ್ಟನೆ ನೀಡಲಾಗಿದೆ, ಈ ಬಗ್ಗೆ ಯಾವುದೇ ಗೊಂದಲಗಳಿಲ್ಲ ಎಂದರು.

ಕೆಲವು ಶಾಲೆಗಳಲ್ಲಿ ಆಡಳಿತ ಮಂಡಳಿಯ ವರು ಶುಲ್ಕ ಬಾಕಿ ಉಳಿಸಿಕೊಂಡಿರುವ ವಿದ್ಯಾರ್ಥಿ ಗಳಿಗೆ ಪ್ರವೇಶ ಪತ್ರ ಕೊಡುವುದಿಲ್ಲ ಎನ್ನುವುದು, ಇಲ್ಲವೇ ಟಿಸಿ, ಮಾರ್ಕ್ಸ್ ಕಾರ್ಡ್ ಅಥವಾ ಶಾಲೆ ಯಿಂದ ಹೊರಗೆ ನಿಲ್ಲಿಸಿರುವುದು ಗಮನಕ್ಕೆ ಬಂದಿದೆ, ಕೆಲವು ದಿನಗಳ ಹಿಂದೆಯೇ ಅಧಿಕಾರಿ ಗಳ ಜತೆ ಸಭೆ ನಡೆಸಿ ನಿರ್ದೇಶನ ನೀಡಿರು ವುದರಿಂದ ಈ ಬಗ್ಗೆ ಯಾರೂ ಆತಂಕಗೊಳ್ಳ ಬಾರದು ಎಂದು ನಾಗೇಶ್ ಮನವಿ ಮಾಡಿದರು.

## ಯಲವಟ್ಟಿ : ಇಂದು ಕಳಸ ನಾಳೆ ರಥೋತ್ಸವ



ಮಲೇಬೆನ್ನೂರು ಸಮೀಪದ ಯಲವಟ್ಟಿ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ನಾಳೆ ದಿನಾಂಕ 27ರ ಭಾನುವಾರ ಬೆಳಿಗ್ಗೆ 7 ಗಂಟೆಗೆ ಜರುಗಲಿದೆ. ರಥೋತ್ಸವದ ಅಂಗವಾಗಿ ಇಂದು ರಾತ್ರಿ 8.30ಕ್ಕೆ ಮಹಾರಥಕ್ಕೆ ಕಳಸಧಾರಣೆ ಮಾಡಲಾಗುವುದು. ನಾಳೆ ಭಾನುವಾರ ಸಂಜೆ 5 ಗಂಟೆಗೆ ಮುಳ್ಳೋತ್ಸವ ನಡೆಯಲಿದೆ.

## ನಗರದಲ್ಲಿ ಇಂದು ಹಾಸ್ಯ ನಾಟಕ

ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಅಂಗವಾಗಿ ಇಂದು ಸಂಜೆ ಶ್ರೀ ಕುಮಾರ್ ವಿಜಯ ನಾಟಕ ತಂಡ ಚಿತ್ತರಗಿ ಇವರಿಂದ ಹಾಸ್ಯ ನಾಟಕ 'ಕಿವುಡ ಮಾಡಿದ ಕಿತಾಪತಿ' ಪ್ರದರ್ಶನ ಗೊಳ್ಳಲಿದೆ. ಪ್ರಾಯೋಜಕರು : ದಿ. ಬಳ್ಳಾರಿ ರಾಮಣ್ಣ, ದಿ. ವಿ.ಆರ್. ಲಿಂಗೇಶ್ ಇವರ ಜ್ಞಾಪಕಾರ್ಥ ಇವರ ಮಗ ಎರ್ರಿಸ್ವಾಮಿ, ದಾವಣಗೆರೆ.

# ಹರಿಹರ ನಗರಸಭಾಧ್ಯಕ್ಷರಾಗಿ ಷಾಹಿನಾಬಾನು



**(1ನೇ ಪುಟದಿಂದ)** ರಾದ ಎಂ.ಎಸ್. ಬಾಬುಲಾಲ್ ಅವರು ರಾಜೀನಾಮೆ ನೀಡಿದ್ದರಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಿಗದಿಪಡಿಸಲಾಗಿತ್ತು.

ನಗರಸಭೆಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಷಾಹಿನಾಬಾನು ದಾದಾಪೀರ್ ಭಾನುವಳ್ಳಿ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಜೆ.ಡಿ.ಎಸ್. ಪಕ್ಷದ ಎ. ವಾಮನಮೂರ್ತಿ ವಕೀಲರು ನಾಮಪತ್ರವನ್ನು ಸಲ್ಲಿಸಿದರು. ಇವರಿಬ್ಬರೇ ಸಲ್ಲಿಸಿದ ನಾಮಪತ್ರಗಳನ್ನು ಪರಿಶೀಲಿಸಿ ಹೊಸಗೌಡರ್ ಅವರು ಅವಿರೋಧ ಆಯ್ಕೆ ಪ್ರಕಟಿಸಿದ್ದಾರೆ.

ಈ ವೇಳೆ ಮಾತನಾಡಿದ ಶಾಸಕ ಎಸ್. ರಾಮಪ್ಪ, ನಾವು ಮತ್ತು ಜೆ.ಡಿ.ಎಸ್. ಪಕ್ಷದ ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ಆಡಳಿತದ ಒಪ್ಪಂದ ಮಾಡಿಕೊಂಡಿದ್ದೆವು. ನಾವು ಮುಂದಿನ 11 ತಿಂಗಳ ಕಾಲ ಅಧಿಕಾರ ಮಾಡುವುದಾಗಿ ಹೇಳಿದರು.

ಜೆ.ಡಿ.ಎಸ್ ಸದಸ್ಯರಾದ ದಾದಾಖಲಂದರ್ ಮತ್ತು ಆರ್.ಸಿ. ಜಾವೇದ್ ಮಾತನಾಡಿ, ನಮ್ಮ ಪಕ್ಷದ 15 ಸದಸ್ಯರು ಇದ್ದಾರೆ. ನಮಗೆ ಮೂವರು ಸದಸ್ಯರ ಬೆಂಬಲ ನೀಡುವುದಕ್ಕೆ ಸಿದ್ಧರಿದ್ದಾರೆ. ಆದರೂ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರು ಕೊಟ್ಟ ಮಾತಿನಂತೆ ನಡೆದುಕೊಂಡು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ತೀರ್ಮಾನ ತೆಗೆದುಕೊಂಡಿದ್ದಾರೆ ಎಂದರು.

ನಗರಸಭೆ ಸದಸ್ಯ ಶಂಕರ್ ಖಟಾವ್ಕರ್, ಪೌರಾಯುಕ್ತರಾದ ಎಸ್. ಲಕ್ಷ್ಮಿ ಮಾತನಾಡಿದರು.

ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷ ಎ. ವಾಮನಮೂರ್ತಿ, ಮಾಜಿ ಅಧ್ಯಕ್ಷೆ ರತ್ನ ಡಿ.ಉಜ್ಜೇಶ್, ಸದಸ್ಯರಾದ ಪಕ್ಕೀರಮ್ಮ ಉಷಾ ಮಂಜುನಾಥ್ , ಬಾಬುಲಾಲ್, ಪಿ. ಎನ್. ವೀರುಪಾಕ್ಷ, ಕೆ.ಜಿ. ಸಿದ್ದೇಶ್, ವಸಂತ್, ಕವಿತಾ ಮಾರುತಿ, ಹನುಮಂತಪ್ಪ, ಅಲ್ತಾಫ್, ಲಕ್ಷ್ಮೀ ಮೋಹನ್, ಸಾವಿತ್ರಮ್ಮ, ಅಬ್ದುಲ್ ಅಲಿಂ, ಷಾಹಿನಾಬಾನು, ಆರ್.ಸಿ. ಜಾವೇದ್, ದಾದಾ ಖಲಂದರ್, ನಾಗರತ್ನ, ಮುಜಾಮಿಲ್ ಬಿಲ್ಲು, ನಗರಸಭೆ ಎಇಇ ಬಿರಾದಾರ, ಆರ್. ಓ. ಮಂಜುನಾಥ್ , ಮನಸ್ಸೂರು ಮದ್ದಿ ಇತರರು ಹಾಜರಿದ್ದರು.

**ಬೇಕಾಗಿದ್ದಾರೆ**
ಸಿಲಿಂಡರ್ ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ. ಗೂಡ್ಸ್ ಗಾಡಿ (ಆಟೋ) ಲೈಸೆನ್ಸ್ ಹೊಂದಿರಬೇಕು. ಗ್ಯಾಸ್ ಏಜೆನ್ಸಿಯಲ್ಲಿ ಅನುಭವವುಳ್ಳವರಿಗೆ ಆದ್ಯತೆ. ತತ್‌ಕ್ಷಣವೇ ಸಂಪರ್ಕಿಸಿ
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಕುವೆಂಪು ನಗರ, ಎಂ.ಸಿ.ಸಿ. 'ಬಿ' ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
# 63, 1st Main, 1st Cross, ನಿಜಲಿಂಗಪ್ಪ ಲೇ ಔಟ್, ದಾವಣಗೆರೆ. ಸಸ್ಯಹಾರಿಗಳು ಮಾತ್ರ.
98455 67223
98808 27928

**Wanted Office Assistant Required**
Extraordinary Communication Skills, English knowledge and paper works. Salary : 8,000/- PM, Qualified can Contact :
94487 29058

**ಕ್ಲರ್ಕ್ ಬೇಕಾಗಿದ್ದಾರೆ**
ಕಂಪ್ಯೂಟರ್ ಅನುಭವವಿರುವ, ಬೇಸಿಕ್ ಟ್ಯಾಲಿ, ಕನ್ನಡ ಟೈಪಿಂಗ್, ಕನ್ನಡ ಮತ್ತು ಇಂಗ್ಲಿಷ್ ಓದಲು, ಬರೆಯಲು ಬಲ್ಲ ಯುವಕ - ಯುವತಿಯರು ಬೇಕಾಗಿದ್ದಾರೆ. ಗ್ಯಾಸ್ ಏಜೆನ್ಸಿಯಲ್ಲಿ ಅನುಭವಳ್ಳವರಿಗೆ ಆದ್ಯತೆ. ತತ್‌ಕ್ಷಣವೇ ಸಂಪರ್ಕಿಸಿ
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಕುವೆಂಪು ನಗರ, ಎಂ.ಸಿ.ಸಿ. 'ಬಿ' ದಾವಣಗೆರೆ.

**ಸಂಘ-ಸಂಸ್ಥೆಗಳ**
ಬೈಲಾ ನೋಂದಣಿ, ನವೀಕರಣ ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ.
MEGHANA ASSOCIATES. (R)
99809 16126

**ಮನೆಗಳು ಬಾಡಿಗೆಗೆ ಇವೆ**
ಸರಸ್ವತಿ ಬಡಾವಣೆಯಲ್ಲಿ ಇಂಡಿಪೆಂಡೆಂಟ್, ಗ್ರೌಂಡ್ ಫ್ಲೋರ್, ಫಸ್ಟ್ ಫ್ಲೋರ್ ಮನೆಗಳು ಬಾಡಿಗೆಗೆ ಇವೆ.
99023 83936
82172 14069
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಬೆಂಗಳೂರಿನಲ್ಲಿ ಸೆಕ್ಯೂರಿಟಿ ಬೇಕಾಗಿದ್ದಾರೆ**
ಸಂಬಳ 9000, ಊಟ, ರೂಂ ಉಚಿತ
ಸಂಪರ್ಕಿಸಿ :
97400 98064, 97400 98047

**ಡ್ರೈವರ್ ಬೇಕಾಗಿದ್ದಾರೆ**
20 ಲೀ ನೀರಿನ ಕ್ಯಾನ್ ಸಪ್ಲೈ ಮಾಡಲು ಡೆಲಿವರಿ ಬಾಯ್ ಮತ್ತು ಡ್ರೈವರ್ ಬೇಕಾಗಿದ್ದಾರೆ.
ಫೋ : 97318 91077

**ತಕ್ಷಣವೇ ಬೇಕಾಗಿದ್ದಾರೆ**
ದಾವಣಗೆರೆಯ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಫೀಲ್ಡ್ ಆಫೀಸರ್‌ಗಳು & ಎಕ್ಸ್-ಸರ್ವಿಸ್‌ಮೆನ್, ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ತಕ್ಷಣವೇ ಸಂಪರ್ಕಿಸಿ :
ಆಕರ್ಷಕ ಸಂಬಳ ಹಾಗೂ ESI & PF ಸೌಲಭ್ಯವಿರುತ್ತದೆ.
86603 98210, 63667 28552
96060 50591

**ಡ್ರೈವರ್ ಬೇಕಾಗಿದ್ದಾರೆ**
ಇನ್ನೋವಾ ಕಾರ್‌ಗೆ ಡ್ರೈವರ್ ಬೇಕಾಗಿದ್ದಾರೆ.
ತತ್‌ಕ್ಷಣವೇ ಸಂಪರ್ಕಿಸಿ
98447 16058

**REQUIRED**
Civil Engineer
Microbiologist
(Experience of Minimum 5 Years)
Contact : 98441 20003
From : Shamanur Sugars
4th Main, P.J. Extension, Davangere.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಕೆಲಸಕ್ಕೆ Sales Boys ಬೇಕಾಗಿದ್ದಾರೆ. (ಅನುಭವವುಳ್ಳವರಿಗೆ ಆದ್ಯತೆ)
77602 68105

**ಸುವರ್ಣಾವಕಾಶ**
ಮನೆಯಲ್ಲೇ ಕುಳಿತು ಫಾರಂನಲ್ಲಿ ಅಂಕಿಗಳನ್ನು ತುಂಬುವ ಕೆಲಸ ವಾರಕ್ಕೆ ಗಳಿಸಿ 3,000-5,000 ಕೊರಿಯರ್ ಸೌಲಭ್ಯವಿದೆ.
95352 48054, 95352 58778

**ಮನೆ ಮಾರಾಟಕ್ಕೆ ಇದೆ.**
ಜಯನಗರ 'A' ಬ್ಲಾಕ್ (ಕಾಳಿದಾಸ ಸರ್ಕಲ್ ಹಿಂಭಾಗ) ಪಶ್ಚಿಮ ದಿಕ್ಕಿನಲ್ಲಿರುವ 30x40 ಅಳತೆಯ (ಕಾರ್ನರ್) ಈಗಾಗಲೇ ಲೀಸ್‌ನಲ್ಲಿರುವ ಎರಡು ಅಂತಸ್ತಿನ ಸುಸಜ್ಜಿತ ವ್ಯವಸ್ಥೆಯ ಹೊಸ ಮನೆ (ಮನೆ ನಂ. 790/6/176) ಮಾರಾಟಕ್ಕಿದೆ. ಸಂಪರ್ಕಿಸಿ :
94827 64316
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

**2BHK & 1BHK ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಬಡಾವಣೆ 'A' ಬ್ಲಾಕ್‌ನ ಬಾಪೂಜಿ MBA ಕಾಲೇಜ್ ಗೇಟ್ ಪಕ್ಕದಲ್ಲಿ ಮೇಲಿನಂತೆ ಎರಡು ಮನೆಗಳು ಮೊದಲನೆ ಮಹಡಿಯಲ್ಲಿ ಬಾಡಿಗೆಗೆ ಇವೆ.
M : 99643 27707

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ : 10,000/-
95352 43598
08192 261003
99161 43003

**WANTED**
BILLING / STORE SALES
Bolas the Factory Outlet
Dry Fruit Shop
Contact : 99007 08999
94484 54709
Qualification : Any Degree with Computer Knowledge

**ಸೈಟುಗಳು / ಮನೆಗಳು ಮಾರಾಟಕ್ಕಿವೆ**
ದಾವಣಗೆರೆ ನಗರ ಹಾಗೂ ಸುತ್ತ ಸೈಟುಗಳು ಹಾಗೂ ಮನೆಗಳು ಮಾರಾಟಕ್ಕಿವೆ.(20x30, 30x40, 30x50, 40x60)
ಸಂಪರ್ಕಿಸಿ: 97432 09680

**ತಕ್ಷಣವೇ ಬೇಕಾಗಿದ್ದಾರೆ**
ದಾವಣಗೆರೆಯ ಸುತ್ತ-ಮುತ್ತಲು ಸೆಕ್ಯೂರಿಟಿ ಗಾರ್ಡ್ ಮತ್ತು ಲಾಡ್ಜ್‌ನಲ್ಲಿ ಸೂಪರ್‌ವೈಸರ್, ರಿಸೆಪ್ಷನ್, ರೂಂ ಬಾಯ್, ಆಯಾ ಮತ್ತು ಆವರಗೆರೆಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್, ಆಫೀಸ್ ಬಾಯ್ ಬೇಕಾಗಿದ್ದಾರೆ. ಕೆಲವು ಕಡೆ ಊಟದ ವ್ಯವಸ್ಥೆಯಿರುತ್ತದೆ. ಆಕರ್ಷಕ ಸಂಬಳವಿರುತ್ತದೆ. ಕೂಡಲೇ ಸಂಪರ್ಕಿಸಿ :
91085 09541, 74113 07071

**ಸೈಟುಗಳು ಮಾರಾಟಕ್ಕಿವೆ**
30x50 ಪಶ್ಚಿಮ ಹೈಟೆಕ್ ಲೇಔಟ್, 30x50 ಪಶ್ಚಿಮ ಸುಬ್ರಮಣ್ಯ ನಗರ, 40x60 ದಕ್ಷಿಣ ವಿದ್ಯಾನಗರ, 30x35 ಪಶ್ಚಿಮ ಬನಶಂಕರಿ ಬಡಾವಣೆ
95385 65909

**SUMMER CAMP SBS NADIGER**
Essential English Coaching Centre
ಹೊಸ ಬ್ಯಾಚುಗಳ ಪ್ರಾರಂಭ
VI-X- ಬೆಳಿಗ್ಗೆ 7-8
III - VI ಬೆಳಿಗ್ಗೆ 8.15-9.15
ಕಾಲಾವಧಿ : 50 ದಿನಗಳು. 25.03.2022 ರಿಂದ
ಫ್ರೀ Class Notes + Practice Session
ಹೆಚ್ಚಿನ ವಿವರಗಳಿಗೆ ಖುದ್ದಾಗಿ ಸಂದರ್ಶಿಸಿರಿ
855/37, ಆಶೀರ್ವಾದ, 2ನೇ ಮೇನ್, 6A ಕ್ರಾಸ್, ಶ್ರೀ ಶಿವಕುಮಾರ ನಗರ, 1ನೇ ಹಂತ, ದಾವಣಗೆರೆ.
Mo : 94498 55575, 87319 60339

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಪ್ರಥಮ ಪುಣ್ಯಸ್ಮರಣೆ**

ಮಂಜುನಾಥ್ ನವಲೆ
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾಯಿತು.
ಸದಾ ನಿಮ್ಮ ಸವಿನೆನಪಿನಲ್ಲಿ
ಪತ್ನಿ: ರಶ್ಮಿ ಮಕ್ಕಳು: ಖುಷಿ, ರಾಶಿ
ತಂದೆ: ರಾಮಕೃಷ್ಣ ನವಲೆ
ತಾಯಿ: ಪ್ರಭಾವತಿ
ಸಹೋದರರಾದ: ಅಶೋಕ್ ರಂಗನಾಥ್, ರಾಘವೇಂದ್ರ ರಾಜ್‌ಕುಮಾರ್ ನವಲೆ ಹಾಗೂ ಬಂಧು-ಮಿತ್ರರು.

**ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ 3 ರಿಂದ 4 ವರ್ಷ ಅನುಭವವುಳ್ಳ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸಂಬಳ : 10000-12000
ಶ್ರೀ ಗಣೇಶ ಹೊಸ್ಯೆರಿ ಮಾರ್ಟ್,
19, ಮಹಿಳಾ ಸಮಾಜ ಕಾಂಪ್ಲೆಕ್ಸ್, ಅಶೋಕ ರಸ್ತೆ, ದಾವಣಗೆರೆ.
94482 07473

**ಶ್ರೀ ಘುತ್ತರಕಿ ಭಾಗ್ಯಮ್ಮದೇವಿ ಜ್ಯೋತಿಷ್ಯಾಲಯ**
ಶ್ರೀ ದತ್ತಾತ್ರೇಯ ಉಪಾಸಕರು ಪಂಡಿತ್ ಶ್ರೀ ಭರತ್ ಗುರೂಜಿ
ಮನೆಯಲ್ಲಿ ಅಶಾಂತಿ, ಅನಾರೋಗ್ಯ, ವಿದ್ಯೆ, ಉದ್ಯೋಗ, ವ್ಯಾಪಾರ, ಶತ್ರು ಕಾಟ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲಕ್ಷ್ಮೀ ವಶ, ಭೂಮಿ ವಶ, ವಿದೇಶ ಪ್ರಯಾಣ, ಸಾಲದ ಬಾಧೆ ಇನ್ನೂ ನಿಮ್ಮ ಹಲವು ಸಮಸ್ಯೆಗಳಿಗೆ ಶೀಘ್ರ ಪರಿಹಾರ. ಫೋನಿನ ಮೂಲಕ ಸ್ವರ ಭವಿಷ್ಯದ ನಿಮ್ಮ ಸಮಸ್ಯೆಗಳಿಗೆ ಪರಿಹಾರ ತಿಳಿಸುತ್ತಾರೆ. ಇಂದೇ ಕರೆ ಮಾಡಿ
9980770791

**ಮೀನು ಸಾಕಣೆ ಮತ್ತು ಕುರಿ ಫಾರಂ**
ಮಾಡಲು ಯೋಗ್ಯ ಇರುವ ಶೆಡ್ ಮತ್ತು ನೀರಿನ ಅನುಕೂಲ ಇರುವ 1 1/2 ಎಕರೆ ಜಮೀನು ಬಾಡಿಗೆಗೆ ಇದೆ.
M : 94484 90778
M : 70190 29466

**To-Let At Banglore**
2 Bed room House at BSK 2nd Stage (Ground Floor) Available for small family Reasonable rate, 24 hours water supply with car parking facility. Rent Negotiable.
CONTACT : SNN Murthy
94819 26105, 74068 52469
080-26715005

**ಸುವರ್ಣಾವಕಾಶ**
ಮನೆಯಲ್ಲೇ ಕುಳಿತು ಫಾರಂನಲ್ಲಿ ಅಂಕಿಗಳನ್ನು ತುಂಬುವ ಕೆಲಸ ವಾರಕ್ಕೆ ಗಳಿಸಿ 3,000-5,000 ಕೊರಿಯರ್ ಸೌಲಭ್ಯವಿದೆ.
74065 36901, 87224 83693

**WANTED**
WORKING PHARMACIST
Qualification : D. Pharma/B. Pharma, Age Below 30 Years, Salary Scale : Rs.12000 to 16000
ಕಾವೇರಿ ಮೆಡಿಹೌಸ್ ಪ್ರೈ. ಲಿ.,
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-2.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**MBA MARKETING**
Freshers required to work in marketing job / Works. Rs.25,000/-PM SALARY Based On PERFORMANCE send Resume to
94487 29058

**ಬೇಕಾಗಿದ್ದಾರೆ**
"Finance company" Manager-1, Assistant manager-1, Tele caller-2, Field officer-1, Office assistant-2, ಹುದ್ದೆಗೆ minimum 2 years experience ಹೊಂದಿರುವ ಯುವಕ, ಯುವತಿಯರು ಬೇಕಾಗಿದ್ದಾರೆ. (Salary 20k to 35k)
ಆಸಕ್ತರು ಕೂಡಲೇ ಸಂಪರ್ಕಿಸಿ :
9739294066

**WANTED**
Cashier - Male or Female
RTO Work - Male
- Written & Verbal Communication Skills
- Customer Service
- Multitasking & Problem-solving
- Microsoft Office & Tally
- Ability To Work Under Pressure

Works Manager - Male
(Experience In Automobile - Min 2 Year)
Age Limit : Below 40
Good Salary (ESI,PF + Incentive)
SRINIVASA HONDA
Ph No : 8884445242

**SUMMER TUITIONS**
FOR SSLC/ PCMB / COMM /ARTS/
100 % Results With solved notes.
SINCHANA ACADEMY
Near RAM & Co Circle, Davangere
90195 80600
85532 78258

**ಬೇಕಾಗಿದ್ದಾರೆ**
ಹರಿಹರದ ವೈನ್ ಶಾಪ್‌ಗಳಲ್ಲಿ ಕೆಲಸ ಮಾಡಲು ಬಿಲ್ಲಿಂಗ್ ಆಪರೇಟರ್ಸ್, ಹೆಲ್ಪರ್ಸ್, ಸಪ್ಲೈಯರ್ಸ್ ಬೇಕಾಗಿದ್ದಾರೆ. ಹರಿಹರದವರಿಗೆ ಆದ್ಯತೆ. ಸಂಪರ್ಕಿಸಿ :
99726 98591
81055 47878

**ಹಾಲಿನ ಡೈರಿ ಮತ್ತು ಕುರಿ ಫಾರಂ**
ಮಾಡಲು ಯೋಗ್ಯವಿರುವ ಶೆಡ್ ಮತ್ತು 1 1/2 ಎಕರೆ ಜಮೀನು ನೀರಿನ ಅನುಕೂಲ ಇರುವ ಜಾಗ ಬಾಡಿಗೆಗಿದೆ.
M : 94484 90778
M : 70190 29466

**ಬೇಕಾಗಿದ್ದಾರೆ**
MRP ಲಿಕ್ಕರ್ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಶಾಮನೂರು ರೋಡ್, ದಾವಣಗೆರೆ.
76194 57200

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

## ಕೌಶಲ್ಯ ತರಬೇತಿ

ದಾವಣಗೆರೆ : ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ರೇಷ್ಮೆ ಇಲಾಖೆ ಆವರಣ, ಹಳೇ ತೋಳ ಹುಣಸೆ ಹಾಗು ಜಿಲ್ಲಾ ಪಂಚಾಯತ್ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯ ಗ್ರಾಮೀಣ ಮಟ್ಟದ ಯುವಕ, ಯುವತಿಯರಿಗೆ ಕೌಶಲ್ಯ ತರಬೇತಿ ಕಾರ್ಯಕ್ರಮ ನಡೆಯಲಿದೆ.

ಡೆಸ್ಕ್‌ಟಾಪ್ ಪಬ್ಲಿಷಿಂಗ್-ಡಿಟಿಪಿ, ಕಂಪ್ಯೂಟರೈಸ್ಡ್ ಅಕೌಂಟಿಂಗ್ ತರಬೇತಿ ನೀಡಲಾಗುವುದು. ತರಬೇತಿ ಸಂಸ್ಥೆಯಲ್ಲಿ ಇಂದು ನಡೆಯುವ ಸಂದರ್ಶನದಲ್ಲಿ ಪಾಲ್ಗೊಳ್ಳಬೇಕು. ವಿವರಗಳಿಗೆ ಸಂಪರ್ಕಿಸುವ ದೂರವಾಣಿ : 79751 39332, 70199 80484, 99641 11314, 95383 95817, 94819 77076.

# ಕೋವಿಡ್ ನಡುವೆಯೂ ಆದಾಯ

**(1ನೇ ಪುಟದಿಂದ)** ಕಂಡಿದೆ, ಸರ್ಕಾರಕ್ಕೆ 27 ಸಾವಿರ ಕೋಟಿ ರೂ. ಆದಾಯ ಹೆಚ್ಚಾಗಿದೆ ಎಂದರು.

ಬೇರೆ ಬೇರೆ ಕ್ಷೇತ್ರಗಳಲ್ಲಿ ಖರ್ಚು ಮಾಡಲು ಶಕ್ತಿ ಬಂದಿದೆ, ಕೇಂದ್ರ ಸರ್ಕಾರದಿಂದ ವಿವಿಧ ಬಾಬ್ತುನಿಂದ ಬಂದ ವರಮಾನವೂ ಹೆಚ್ಚಾಗಿದೆ, ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರಕ್ಕೆ ಆರ್ಥಿಕ ಸ್ವಾವಂಬನೆ ಸಾಧ್ಯವಾಗಲಿದೆ, ಸಾಲ ಮರುಪಾವತಿ ಸಾಮರ್ಥ್ಯವೂ ಹೆಚ್ಚಾಗಿ, ಸಾಲ ಪಡೆಯುವ ಅನಿವಾರ್ಯತೆ ಕಡಿಮೆಯಾಗಲಿದೆ. ಈ ವರ್ಷ ಏಳು ಸಾವಿರ ಕೋಟಿ ರೂ.ಗಳ ಪೈಕಿ, ಐದು ಸಾವಿರ ಕೋಟಿ ರೂ. ಮರು ಪಾವತಿಯಾಗುತ್ತಿದೆ ಎಂದರು.

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 63,765 ಕೋಟಿ ರೂ. ಗುರಿಯಿತ್ತು, 69349 ಕೋಟಿ ರೂ. ಸಂಗ್ರಹವಾಗಿದೆ. ನಿಗದಿತ ಗುರಿಗಿಂತ 5 ಸಾವಿರ ಕೋಟಿ ರೂ. ಹೆಚ್ಚಾಗಿದೆ. ಅಬಕಾರಿ ಇಲಾಖೆಯಲ್ಲಿ 1300 ಕೋಟಿ ರೂ., ನೋಂದಣಿ ಮತ್ತು ಮುದ್ರಾಂಕ ಇಲಾಖೆಯುಲ್ಲಿ 600 ಕೋಟಿ ರೂ. ಆದಾಯ ಸಂಗ್ರಹವಾಗಿದೆ.

ಕೇಂದ್ರ ಸರ್ಕಾರದಿಂದ 24,000 ಕೋಟಿ ರೂ. ನಿರೀಕ್ಷಿಸಲಾಗಿತ್ತು, ನಿರೀಕ್ಷೆ ಮೀರಿ 27,140 ಕೋಟಿ ಬಂದಿದೆ. ಸಹಾಯಧನದಲ್ಲಿ 15,538 ಕೋಟಿ ರೂ. ಬದಲು, 17,741 ಕೋಟಿ ರೂ. ಬಂದಿದೆ, ಜಿಎಸ್‌ಟಿ ಪರಿಹಾರವಾಗಿ 12,700 ಕೋಟಿ ರೂ. ಬದಲು, 27,085 ಕೋಟಿ ರೂ. ನೀಡಲಾಗುತ್ತಿದೆ. ಇದರಲ್ಲಿ ಸಾಲವೂ ಒಳಗೊಂಡಿದೆ. ಆದರೆ ಅದಕ್ಕೆ ಕೇಂದ್ರ ಸರ್ಕಾರವೇ ಹೊಣೆಯಾಗಿದ್ದು, ರಾಜ್ಯ ಸರ್ಕಾರ ಯಾವುದೇ ಜವಾಬ್ದಾರಿಯಾಗಿಲ್ಲ ಎಂದರು.

ರಾಜ್ಯದ ಆರ್ಥಿಕ ಶಕ್ತಿ ಚೇತರಿಕೆ ಕಂಡಿದೆ. ಬಜೆಟ್ ಬಳಿಕವೂ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣಕ್ಕೆ ವಿರೋಧ ಪಕ್ಷಗಳೇ ಮೆಚ್ಚುಗೆ ವ್ಯಕ್ತಪಡಿಸಿವೆ, ಹೆಚ್ಚಾದ ಆದಾಯದ ಪೈಕಿ ನೀರಾವರಿಗೆ ಒಂದುವರೆ ಸಾವಿರ ಕೋಟಿ ರೂ. ಹೆಚ್ಚಾಗಿ ನೀಡಲಾಗಿದೆ. ಆದ್ಯತಾ ವಲಯಗಳಿಗೆ ಹೆಚ್ಚುವರಿ ಹಣ ನೀಡಲಾಗುತ್ತಿದೆ. 27,000 ಕೋಟಿ ರೂ. ಹೆಚ್ಚುವರಿ ವೆಚ್ಚವನ್ನು ಪೂರಕ ಅಂದಾಜಿನಲ್ಲಿ ಅಳವಡಿಸಲಾಗಿದೆ ಎಂದು ವಿವರಿಸಿದರು.

# ಬೇಡ ಜಂಗಮ ಪ್ರಮಾಣ ಪತ್ರ ಪಡೆದ ರೇಣುಕಾಚಾರ್ಯ, ವಾಗೀಶ್ ಸ್ವಾಮಿ ವಿರುದ್ಧ ಕ್ರಮಕ್ಕೆ ಒತ್ತಾಯ

ದಾವಣಗೆರೆ, ಮಾ.25- ಸರ್ಕಾರಿ ಸೌಲಭ್ಯಕ್ಕಾಗಿ ಜಂಗಮರು ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆಯುತ್ತಿರುವುದನ್ನು ಬಹುಜನ ಸಮಾಜ ಪಾರ್ಟಿ ಜಿಲ್ಲಾ ಘಟಕ ತೀವ್ರವಾಗಿ ಖಂಡಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾಧ್ಯಕ್ಷ ಡಿ. ಹನುಮಂತಪ್ಪ, ಶಾಸಕ ರೇಣುಕಾಚಾರ್ಯ ಅವರು ಮಕ್ಕಳಿಗೆ ಬೇಡ ಜಂಗಮ ಪ್ರಮಾಣ ಪತ್ರ ಕೊಡಿಸಿದ್ದಾರೆ. ಇತ್ತ ಜಿಲ್ಲಾ ಪಂಚಾಯ್ತಿ ಕ್ಷೇತ್ರದಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ವಾಗೀಶ್ ಸ್ವಾಮಿ ಈಗ ಎಸ್ಸಿ ಮಾಯಕೊಂಡ ವಿಧಾನಸಭಾ ಕ್ಷೇತ್ರಕ್ಕೆ ಸ್ಪರ್ಧಿಸಲು ಹೊರಟಿದ್ದಾರೆ ಎಂದು ಆರೋಪಿಸಿದರು.

ರೇಣುಕಾಚಾರ್ಯ ಹಾಗೂ ವಾಗೀಶ್ ಸ್ವಾಮಿಯ ವಿರುದ್ಧ ದೂರು ನೀಡುತ್ತಿದ್ದು, ಜಿಲ್ಲಾಧಿಕಾರಿಗಳು ಹಾಗೂ ಎಸ್ಪಿ ಅವರು ಕೂಡಲೇ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಾಳೆ ದಿ.29ರಂದು ಹರಿಹರ ತಾಲ್ಲೂಕು ಬಹುಜನ ಸಮಾಜ ಪಾರ್ಟಿ ವತಿಯಿಂದ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗುವುದು. 30 ರಂದು ಹೊನ್ನಾಳಿ ತಾಲ್ಲೂಕು ಘಟಕದ ವತಿಯಿಂದ ಐಬಿ ವೃತ್ತದಿಂದ ತಹಶೀಲ್ದಾರ್ ಕಚೇರಿ ವರೆಗೆ ಮೆರವಣಿಗೆ ಮೂಲಕ ಹೊರಟು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಹೆಚ್.ಮಲ್ಲೇಶ್, ವೆಂಕಟೇಶ್ ಬಾಬು ಎಸ್.ಜಿ., ಹೆಚ್.ಸಿ. ಮಲ್ಲಪ್ಪ, ಶಿವು, ರಂಗನಾಥ್, ವೆಂಕಟೇಶ್, ಎಂ. ಚಂದ್ರಪ್ಪ, ಕರಿಬಸಪ್ಪ, ಅಜ್ಜಪ್ಪ ಇತರರು ಉಪಸ್ಥಿತರಿದ್ದರು.

# 22 ಕೆರೆಗಳ ಏತ ನೀರಾವರಿ; ಹೊಸ ಪೈಪ್‌ಲೈನ್‌ಗೆ ಆಗ್ರಹ

ದಾವಣಗೆರೆ, ಮಾ.25- 22 ಕೆರೆಗಳ ಏತ ನೀರಾವರಿ ಯೋಜನೆಯಲ್ಲಿ ಅವೈಜ್ಞಾನಿಕವಾಗಿ ಪೈಪ್ ಅಳವಡಿಸಿರುವ ಕಾರಣ, ಪೈಪ್‌ಲೈನ್ ಪದೇ ಪದೇ ಒಡೆಯುತ್ತಿರುವುದರಿಂದ ರೈತರಿಗೆ ತೊಂದರೆಯಾಗುತ್ತಿದೆ ಎಂದು 22 ಕೆರೆಗಳ ಏತ ನೀರಾವರಿ ಹೋರಾಟಗಾರ ಕೆ.ಎಂ. ಹಿಮಂತರಾಜ್ ಆರೋಪಿಸಿದ್ದಾರೆ.

22 ಕೆರೆಗಳ ಏತ ನೀರಾವರಿ ಯೋಜನೆ ಆರಂಭವಾಗಿ ಎಲ್ ಅಂಡ್ ಟಿ ಕಂಪನಿಯವರ ಮೂಲಕ ಕಾಮಗಾರಿ ಪೂರ್ಣಗೊಳಿಸಿ, ಕೆರೆಗಳಿಗೆ ನೀರನ್ನು ಹರಿಸಲಾಗಿತ್ತು. ಆದರೆ ಅವೈಜ್ಞಾನಿಕ ಪೈಪ್ ಜೋಡಣೆಗಳಿಂದಾಗಿ ಮತ್ತು ಕಂಪನಿಯವರ ನಿರ್ಲಕ್ಷ್ಯತನದಿಂದಾಗಿ ನೀರು ರಸ್ತೆಯಲ್ಲಿ ಪೋಲಾಗುತ್ತಿದ್ದು, 22 ಕೆರೆಗಳ ಜಾಗದಲ್ಲಿರುವ ರೈತರಿಗೆ ಇದರಿಂದಾಗಿ ಸಮಸ್ಯೆ ಉಂಟಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# 53 ಕೆರೆ ನೀರಾವರಿ ಯೋಜನೆ: ರೈತರಿಗೆ ಸೂಕ್ತ ಪರಿಹಾರ ನೀಡಲು ಒತ್ತಾಯ

ದಾವಣಗೆರೆ, ಮಾ. 25- ಜಗಳೂರು ಏತ ನೀರಾವರಿ ಯೋಜನೆಯಡಿ ಬರುವ ದೀಟೂರು ಗ್ರಾಮದಿಂದ ಜಗಳೂರಿಗೆ 53 ಕೆರೆಗಳಿಗೆ ನೀರು ತುಂಬಿಸಲು 5.25 ಅಡಿ ಅಗಲದ ರೈಸಿಂಗ್ ಮೇನ್ ಪೈಪ್‌ಲೈನ್ ಕಾಮಗಾರಿಯಿಂದ ಸಂಕಷ್ಟಕ್ಕೊಳಗಾದ ರೈತರಿಗೆ ಸೂಕ್ತ ಪರಿಹಾರ ನೀಡುವಂತೆ ಕಕ್ಕರಗೊಳ್ಳದ ಕೆ.ಮಂಜುನಾಥ್ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಜನೆ ಕುರಿತಂತೆ ಕೆ.ಎನ್.ಎಲ್.ಎಲ್. ಅಧಿಕಾರಿಗಳು ರೈತರಿಗೆ ಯಾವುದೇ ಮಾಹಿತಿ ತಿಳಿಸಿಲ್ಲ. ಕಕ್ಕರಗೊಳ್ಳ ಹಾಗೂ ಹಿರೇಮೇಗೇನಹಳ್ಳಿಯ ಕೆಲ ರೈತರಿಗೆ ಮಾತ್ರ ನೋಟಿಸ್ ನೀಡಲಾಗಿದ್ದು, ಉಳಿದ ಬಹುತೇಕ ರೈತರಿಗೆ ನೋಟಿಸ್ ಕೊಟ್ಟಿಲ್ಲ ಎಂದು ಆರೋಪಿಸಿದರು.

ಯೋಜನೆಗೆ ರೈತರ ಲಿಖಿತ ರೂಪದ ಒಪ್ಪಿಗೆಯನ್ನು ಪಡೆಯಲಾಗಿಲ್ಲ. ಭೂ ನಾಶದ ಪರಿಹಾರ, ವಾರ್ಷಿಕ ಬಾಡಿಗೆ ಹಾಗೂ ಭದ್ರತೆ ಬಗ್ಗೆ ರೈತರಿಗೂ ಕೆಎನ್‌ಎನ್‌ಎಲ್ ಅಧಿಕಾರಿಗಳ ನಡುವೆ ಒಡಂಬಡಿಕೆಯಾಗಬೇಕು. ಆದರೆ ಇದುವರೆಗೂ ಯಾವುದೇ ರೈತರೊಂದಿಗೆ ಒಡಂಬಡಿಕೆಯಾಗಿಲ್ಲ ಎಂದು ಹೇಳಿದರು.

ಹನುಮಂತಪ್ಪ ಆಲೂರು, ಎಸ್.ಬಿ. ಮಂಜುನಾಥ್, ಮಹದೇವಪ್ಪ ಬಿ. ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಎಲೆಬೇತೂರಿನಲ್ಲಿ ಇಂದು - ನಾಳೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ




ಎರಡು ದಿನಗಳ ಅಕ್ಷರ ಜಾತ್ರೆಗೆ ಸಿದ್ಧಗೊಂಡಿರುವ ಬೃಹತ್ ವೇದಿಕೆಯಲ್ಲಿ ಸಮ್ಮೇಳನದ ಅಂತಿಮ ರೂಪು-ರೇಷೆಗೆ ಸಂಬಂಧಿಸಿದಂತೆ ಚರ್ಚಿಸುತ್ತಿರುವ ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಮತ್ತು ಪದಾಧಿಕಾರಿಗಳು ಹಾಗೂ ಗ್ರಾಮದ ಮುಖಂಡರು.





ದಾವಣ ಗೆರೆ ಜಿಲ್ಲಾ 11ನೇ ಕನ್ನಡ ಸಾಹಿತ್ಯ ಸಮ್ಮೇಳನವು ದಾವಣಗೆರೆ ತಾಲ್ಲೂಕಿನ ಎಲೆಬೇತೂರು ಗ್ರಾಮದ ಮಾಗಾನಹಳ್ಳಿ, ಅಂಬಾಸಪ್ಪನವರ ಮೈದಾನದಲ್ಲಿ ಇಂದು ಮತ್ತು ನಾಳೆ ನಡೆಯಲಿದೆ.

ಇಂದು ಬೆಳಿಗ್ಗೆ 8.30 ಕ್ಕೆ ಶ್ರೀಮತಿ ಕೆ.ಸಿ. ಸುಮ ಬಿ. ವಿರೂಪಾಕ್ಷಪ್ಪ ರಾಷ್ಟ್ರ ಧ್ವಜಾರೋಹಣ ನೆರವೇರಿಸುವರು. ಪರಿಷತ್ತಿನ ಧ್ವಜಾರೋಹಣ ಬಿ. ವಾಮದೇವಪ್ಪ ಹಾಗೂ ನಾಡ ಧ್ವಜಾರೋಹಣವನ್ನು ಮೇಜರ್ ಡಾ. ಹರ್ಷ ಕೆ.ಬಿ. ನೆರವೇರಿಸುವರು.

ಸಮ್ಮೇಳನದ ಮೆರವಣಿಗೆಯು ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ. ಎಸ್ಪಿ ಸಿ.ಬಿ. ರಿಷ್ಯಂತ್ ಅವರು ಮೆರವಣಿಗೆ ಉದ್ಘಾಟಿಸುವರು. ಅತಿಥಿಗಳಾಗಿ ಬಿ. ಪಾಲಾಕ್ಷಿ, ಎಂ. ನಾಗಪ್ಪ, ಎಂ. ಪತ್ರಿಬಸಪ್ಪ, ಹೆಚ್. ಬಸವರಾಜಪ್ಪ, ಎಂ. ಬಸವರಾಜಪ್ಪ, ಬಿ.ಪ್ರಭು, ಬಿ. ಕರಿಬಸಪ್ಪ, ಬಿ.ಜಿ. ಸಂಗನಗೌಡ್ರು, ಬಿ. ವಿರುಪಾಕ್ಷಪ್ಪ, ಶಶಿಧರ ಹೆಮ್ಮನಬೇತೂರು, ಕೆ. ಸಿರಾಜ್, ಬಿ. ಆನಂದಮೂರ್ತಿ ಮತ್ತು ಇತರರು ಪಾಲ್ಗೊಳ್ಳುವರು.

ಬೆಳಿಗ್ಗೆ 11 ಗಂಟೆಗೆ ಸಮ್ಮೇಳನದ ಉದ್ಘಾಟನಾ ಸಮಾರಂಭ ನಡೆಯುವುದು. ತರಳಬಾಳು ಜಗದ್ಗುರು ಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸುವರು.

ಅಧ್ಯಕ್ಷತೆಯನ್ನು ಎಸ್.ಎ. ರವೀಂದ್ರನಾಥ್ ವಹಿಸುವರು. ನಾಡೋಜ ಡಾ. ಮಹೇಶ್ ಜೋಶಿ ಸಮ್ಮೇಳನ ಉದ್ಘಾಟಿಸುವರು. ಬಿ. ವಾಮದೇವಪ್ಪ ಆಶಯ ನುಡಿಗಳನ್ನಾಡುವರು. ಭೈರತಿ ಬಸವರಾಜ ಅವರು ಸಿರಿಗೆರೆ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಮಹಾಮಂಟಪವನ್ನು ಉದ್ಘಾಟಿಸುವರು. ಬಸವನಾಳ್ ಬಸವರಾಜಪ್ಪ ವೇದಿಕೆಯ ಉದ್ಘಾಟನೆಯನ್ನು ಡಾ. ಶಾಮನೂರು ಶಿವಶಂಕರಪ್ಪ ನೆರವೇರಿಸುವರು.

ಸ್ಮರಣ ಸಂಚಿಕೆಯನ್ನು ಜಿ.ಎಂ. ಸಿದ್ದೇಶ್ವರ ಬಿಡುಗಡೆ ಮಾಡಲಿದ್ದು, ಸವಗದ್ದಿಗೆ ಸಂಗಮೇಶ್ವರ ಸ್ವಾಮಿ ಮಹಾದ್ವಾರವನ್ನು ಮಾಡಾಳು ವಿರುಪಾಕ್ಷಪ್ಪ ಉದ್ಘಾಟಿಸುವರು. ಎಸ್.ವಿ. ರಾಮಚಂದ್ರ, ಪ್ರೊ. ಎನ್. ಲಿಂಗಣ್ಣ ಕೃತಿಗಳ ಬಿಡುಗಡೆ ನೆರವೇರಿಸುವರು. ಯುವರತ್ನ ಪುನೀತ್ ರಾಜ್‌ಕುಮಾರ್ ಮಹಾದ್ವಾರದ ಉದ್ಘಾಟನೆಯನ್ನು ಶಾಮನೂರು ಮಲ್ಲಿಕಾರ್ಜುನ್ ನೆರವೇರಿಸುವರು. ಶ್ರೀ ದುರ್ಗಾಂಬಿಕಾ ದೇವಿ ಮಹಾದ್ವಾರವನ್ನು ಎಸ್. ರಾಮಪ್ಪ ಉದ್ಘಾಟಿಸುವರು.

ಸಮ್ಮೇಳನಾಧ್ಯಕ್ಷತೆಯನ್ನು ಶ್ರೀಮತಿ ಜಿ.ಎಸ್. ಸುಶೀಲಾದೇವಿ ಆರ್. ರಾವ್ ವಹಿಸುವರು. ಕನ್ನಡ ಧ್ವಜವನ್ನು ಎನ್.ಟಿ. ಎರ್ರಿಸ್ವಾಮಿ ಹಸ್ತಾಂತರಿಸುವರು. ಮುಖ್ಯ ಅತಿಥಿಗಳಾಗಿ ಪ್ರೊ. ಕಾಳೇಗೌಡ ನಾಗವಾರ, ಮಹಾಂತೇಶ ಬೀಳಗಿ, ವಿಜಯ ಮಹಾಂತೇಶ್ ಬಿ. ದಾನಮ್ಮನವರ, ಡಾ. ಹೆಚ್. ಎಸ್. ಮಂಜುನಾಥ ಕುರ್ಕಿ ಆಗಮಿಸುವರು.

ಮಧ್ಯಾಹ್ನ 2 ಗಂಟೆಗೆ ನಡೆಯುವ ಗೋಷ್ಠಿಯಲ್ಲಿ ದಾವಣಗೆರೆ ಜಿಲ್ಲೆಯ ಚಾರಿತ್ರಿಕ ಸಂಗತಿಗಳು ವಿಷಯ ಕುರಿತು ಡಾ. ಎಸ್. ನಾಗರಾಜಪ್ಪ, ಎಂ.ಜಿ. ರಂಗಸ್ವಾಮಿ, ಬಿ.ಪಿ. ಕುಮಾರ್ ನಡೆಸಿಕೊಡುವರು. ಅಧ್ಯಕ್ಷತೆಯನ್ನು ಡಾ. ಬಿ. ರಾಜಶೇಖರಪ್ಪ ವಹಿಸುವರು.

ಮಧ್ಯಾಹ್ನ 3.30 ಕ್ಕೆ ರೈತ ಉತ್ಪಾದಕ ಕಂಪನಿ - ಅವಕಾಶಗಳು ಮತ್ತು ಸವಾಲುಗಳು ವಿಷಯವಾಗಿ ವಿಶೇಷ ಉಪನ್ಯಾಸ ನಡೆಯುವುದು. ಉಪನ್ಯಾಸವನ್ನು ಡಾ. ಎಂ.ಜಿ. ಬಸವನಗೌಡ ನೀಡುವರು.

ಸಂಜೆ 4 ಗಂಟೆಗೆ ನೂತನ ಶಿಕ್ಷಣ ನೀತಿ ಮತ್ತು ಕನ್ನಡ ವಿಷಯ ಕುರಿತು ಗೋಷ್ಠಿ ನಡೆಯುವುದು. ಅಧ್ಯಕ್ಷತೆಯನ್ನು ಡಾ. ಹೆಚ್.ವಿ. ವಾಮದೇವಪ್ಪ ವಹಿಸುವರು. ಹೆಚ್.ಕೆ. ಲಿಂಗರಾಜು, ಡಾ. ದಾದಾಪೀರ್ ನವಿಲೇಹಾಳ್, ಡಾ. ಎ.ಬಿ. ರಾಮಚಂದ್ರಪ್ಪ ವಿಷಯ ಮಂಡಿಸುವರು.

ಸಂಜೆ 5.30 ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವುದು. ಅಧ್ಯಕ್ಷತೆ : ರವಿಚಂದ್ರ. ಉದ್ಘಾಟನೆ : ಯುಗಧರ್ಮ ರಾಮಣ್ಣ, ಮುಖ್ಯ ಅತಿಥಿಗಳು : ದೇವರಮನೆ ಶಿವಕುಮಾರ್. ಬಿ.ಎನ್. ಮಲ್ಲೇಶ್, ಬಸನಗೌಡ ಕೊಟೂರ, ಚಂದ್ರಶೇಖರ ಎಸ್.ಕೆ., ಕೆ.ಬಿ. ಪರಮೇಶ್ವರಪ್ಪ, ಕೆ.ಎನ್. ಸೋಮಶೇಖರಪ್ಪ, ಬಿ. ಪ್ರಭು, ಶ್ರೀಮತಿ ಎಂ.ಜಿ. ಶಶಿಕಲಾ.

# ಉಚಿತ ಮಜ್ಜಿಗೆ, ನೀರು ವಿತರಿಸುವ ಸೇವೆ ಆರಂಭ



## ಕರುಣಾ ಜೀವ ಕಲ್ಯಾಣ ಟ್ರಸ್ಟ್ ನ ಸಾಮಾಜಿಕ ಸೇವೆಗೆ ಗಣ್ಯರ ಶ್ಲಾಘನೆ

ದಾವಣಗೆರೆ, ಮಾ.25- ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ 45 ದಿನಗಳ ಕಾಲ ನಗರದ ವಿವಿಧ ವೃತ್ತಗಳಲ್ಲಿ ನಡೆಯಲಿರುವ ಮಜ್ಜಿಗೆ ವಿತರಣೆ ಕಾರ್ಯಕ್ರಮಕ್ಕೆ ಇಂದು ಚಾಲನೆ ನೀಡಲಾಯಿತು.

ನಗರದ ಜಯದೇವ ವೃತ್ತದಲ್ಲಿ ಏರ್ಪಾಡಾಗಿದ್ದ ಕಾರ್ಯಕ್ರಮಕ್ಕೆ ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಚಾಲನೆ ನೀಡಿದರು. ನಂತರ ಮಾತನಾಡಿದ ಶ್ರೀಗಳು, ಬೇಸಿಗೆ ಬಂತೆಂದರೆ ಸಾಕು. ಬಿರು ಬಿಸಿಲಿನ ದಾಹಕ್ಕೆ ಮನುಷ್ಯರು ಹೈರಾಣಾಗಿ ಹೋಗುತ್ತಾರೆ. ಇಂತಹ ಸಮಯದಲ್ಲಿ ನೀರಿನ ಬದಲು ಮಜ್ಜಿಗೆ ಕುಡಿದರೆ ಆರೋಗ್ಯ ಸುಧಾರಣೆಯಾಗುತ್ತದೆ. ಅಲ್ಲದೆ ಮನಸ್ಸಿಗೂ ನೆಮ್ಮದಿ ಸಿಗುತ್ತದೆ.

ಬಿಸಿಲಿನ ಝಳ ಹೆಚ್ಚಾದರೆ ನೀರು ಕುಡಿಯಬೇಕೆನ್ನಿಸುತ್ತದೆ. ನೀರು ಕುಡಿದರೂ ಸಹ ಸಮಾಧಾನ ಆಗುವುದಿಲ್ಲ. ದೇಹಕ್ಕೆ ಸಮಾಧಾನ ಆಗಬೇಕೆಂದರೆ ಮಜ್ಜಿಗೆ ಕುಡಿಯಬೇಕು ಎಂದರು.

ಯಾರು ಮಜ್ಜಿಗೆ ಕುಡಿಯುತ್ತಾರೋ ಅವರ ಆರೋಗ್ಯ ಸುಧಾರಣೆ ಜೊತೆಗೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಶ್ರೀಮಂತರು ಕೂಲ್‌ಡ್ರಿಂಕ್ಸ್ ಕುಡಿಯುತ್ತಾರೆ. ಆದರೆ ಬಡವರು, ಕುಡಿಯುವ ನೀರಿಗೂ ದುಡ್ಡಿಲ್ಲದೆ ಪರಿತಪಿಸುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ಕರುಣಾಜೀವ ಕಲ್ಯಾಣ ಟ್ರಸ್ಟ್ ಮಜ್ಜಿಗೆ ವಿತರಣೆ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಹೇಳಿದರು.

ದಾವಣಗೆರೆಯ ಜಯದೇವ ವೃತ್ತ, ಹರಳೆಣ್ಣೆ ಕೊಟ್ರಬಸಪ್ಪ ವೃತ್ತ, ಜಿಲ್ಲಾಸ್ಪತ್ರೆ, ಚಾಮರಾಜಪೇಟೆಯ ಹಳೆ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ಕಡೆಗಳಲ್ಲಿ ಮಜ್ಜಿಗೆ ವಿತರಿಸಲಾಗುತ್ತದೆ ಎಂದರು.

ಕರುಣಾಜೀವ ಕಲ್ಯಾಣ ಟ್ರಸ್ಟ್‌ನ ಅಧ್ಯಕ್ಷ ಎಚ್.ಎನ್.ಮಲ್ಲಿಕಾರ್ಜುನಪ್ಪ, ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ, ಟ್ರಸ್ಟಿಗಳಾದ ಮಂಜುಳಾ ಬಸವಲಿಂಗಪ್ಪ, ಎಲ್.ಎಸ್. ಪ್ರಭುದೇವ್, ಮಧುಸೂದನ್ ಮತ್ತಿತರರಿದ್ದರು.

# ಹರಿಹರ : ಕುಸ್ತಿ ಪಂದ್ಯಗಳಿಗೆ ಚಾಲನೆ



ಹರಿಹರ, ಮಾ. 25 - ನಗರದಲ್ಲಿ ಶ್ರೀ ಗ್ರಾಮ ದೇವತೆ ಊರಮ್ಮದೇವಿಯ ಜಾತ್ರೆಯ ಅಂಗವಾಗಿ ಡಿ.ಆರ್.ಎಂ. ಶಾಲಾ ಮೈದಾನದಲ್ಲಿ ಆಯೋಜಿಸಲಾಗಿದ್ದ ಬಯಲು ಜಂಗಿ ಕುಸ್ತಿ ಪಂದ್ಯಕ್ಕೆ ಚಾಲನೆ ನೀಡಲಾಯಿತು.

ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ, ಸಾಂಗ್ಲಿ ಮತ್ತು ರಾಜ್ಯದಾದ್ಯಂತ ಬೆಳಗಾವಿ, ಹುಬ್ಬಳ್ಳಿ, ಬಾಗಲಕೋಟೆ, ಶಿವಮೊಗ್ಗ, ದಾವಣಗೆರೆ, ಹಾವೇರಿ, ರಾಣೇಬೆನ್ನೂರು, ಹೊನ್ನಾಳಿ ಸೇರಿದಂತೆ ವಿವಿಧ ನಗರಗಳಿಂದ ಆಗಮಿಸಿದ್ದ ಕುಸ್ತಿ ಪಟುಗಳು ಗೆಲುವಿಗಾಗಿ ಸೆಣಸಾಡಿದರು.

ಶಾಸಕ ಎಸ್. ರಾಮಪ್ಪ ಕುಸ್ತಿ ಪಂದ್ಯಕ್ಕೆ ಚಾಲನೆ ನೀಡಿದರು. ದಾವಣಗೆರೆಯ ಟಿ. ದಾಸಕರಿಯಪ್ಪ, ಹಿರಿಯ ಕುಸ್ತಿ ಪಟು ಕೆ. ಜಡಿಯಪ್ಪ, ಉತ್ಸವ ಸಮಿತಿಯ ಅಧ್ಯಕ್ಷ ಕೆ. ಅಣ್ಣಪ್ಪ, ಸುರೇಶ್ ಚಂದಾಪೂರ್, ಜಗದೀಶ್ ಚೂರಿ, ಅಣ್ಣಪ್ಪ ಶಾವಿ, ಬ್ಯಾಂಕ್ ನಾಗರಾಜ್, ಕಾಳಿಗ ನಾಗರಾಜ್, ಹಂಚಿನ ನಾಗರಾಜ್, ಆಸೀಫ್ ಹಾಲಿ, ಪಾಲಾಕ್ಷಪ್ಪ, ಬೀರೇಶ್, ಕುಮಾರ್ ಅಡಿಕೆ ಇತರರು ಹಾಜರಿದ್ದರು.

ಗುತ್ತೂರು ಗ್ರಾಮಾಂತರ ಠಾಣೆಯ ಪಿಎಸ್‌ಐ ಸೈಫುದ್ದಿನ್ ಸಾಬ್, ಎ.ಎಸ್.ಐ. ವಿಜಯಕುಮಾರ್, ಪೊಲೀಸ್ ಸಿಬ್ಬಂದಿಗಳಾದ ರವಿಕುಮಾರ್, ರಾಜು ಸತೀಶ್ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡರು.

# ಕುಂದೂರಿನಲ್ಲಿ ಆಂಜನೇಯ ಸ್ವಾಮಿ ತೇರು

ಹೊನ್ನಾಳಿ ತಾಲ್ಲೂಕಿನ ಕುಂದೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ ನಾಳೆ ಭಾನುವಾರ ಬೆಳಗ್ಗೆ 11.45ಕ್ಕೆ ಜರುಗುವುದು. ಸೋಮವಾರ ಬೆಳಗಿನ ಜಾವ 4ಕ್ಕೆ ಮಹಾ ರಥೋತ್ಸವ, ಮಧ್ಯಾಹ್ನ 3.30ರಿಂದ ಸಂಜೆ 6.30ರವರೆಗೆ ಮುಳ್ಳೋತ್ಸವ, ಕಾರಣಿಕ ಮಹೋತ್ಸವ ನಡೆಯಲಿದೆ.

**10th Std. Tuition Classes**

Regular Batches starts from 1st of April 2022
Subject : **Maths & Science**
(Excellent Coaching with an experience of 32 years in teaching profession)

Contact : **Mr David**
# 2491, Near Bakkeshwara School, 9th Main, M.C.C.' A' Block, Davangere
**Mob : 94482 33494**
**(2BHK House is available for Rent)**

# ವಾಲ್ಮೀಕಿ ನಾಯಕ ಸಮಾಜದ ಕಣ್ಮಣಿ ಹಾವನೂರು



## ಜನ್ಮ ಜಯಂತ್ಯೋತ್ಸವ ಸಮಾರಂಭದಲ್ಲಿ ಬಿ.ವೀರಣ್ಣ ಬಣ್ಣನೆ

ದಾವಣಗೆರೆ,ಮಾ.25- ಎಲ್.ಜಿ. ಹಾವನೂರ ಅವರು ಸಮಾಜದಲ್ಲಿ ತುಳಿತಕ್ಕೆ ಒಳಗಾಗಿದ್ದ ಹಿಂದುಳಿದ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಕಲ್ಪಿಸಿದ ನೇತಾರರು ಎಂದು ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ ಬಣ್ಣಿಸಿದರು.

ನಗರದ ವಾಲ್ಮೀಕಿ ನಾಯಕ ಸಮಾಜದ ವಿದ್ಯಾರ್ಥಿ ನಿಲಯದಲ್ಲಿ ನಾಯಕ ಸಮಾಜದ ವತಿಯಿಂದ ಇಂದು ಏರ್ಪಾಡಾಗಿದ್ದ ಹಾವನೂರು ಅವರ 97ನೇ ಜನ್ಮ ಜಯಂತ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರದ ಕಾನೂನು ಮಂತ್ರಿಯಾಗಿ ರಾಜ್ಯದ ಜನರಿಗೆ ವಿಶೇಷವಾಗಿ ಹಿಂದುಳಿದ ವರ್ಗದ ಏಳಿಗೆಗೆ ಕಾರಣೀಕರ್ತರಾಗಿದ್ದಾರೆ. ಅವರ ಅವಧಿಯಲ್ಲಿ ಜಾರಿಗೆ ಬಂದ ಅನೇಕ ಜನಪರ ಕಾರ್ಯಕ್ರಮಗಳು ಇಂದಿನ ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನರಿಗೆ ಸಾಮಾಜಿಕ ನ್ಯಾಯ ಕಲ್ಪಿಸುವಲ್ಲಿ ಸಹಕಾರಿಯಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಹಿಂದುಳಿದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು, ಶಿಕ್ಷಣ ವಸತಿ ನಿಲಯಗಳನ್ನು ಆರಂಭಿಸುವ ಮೂಲಕ ಬಡವರ ಶೈಕ್ಷಣಿಕ ಪ್ರಗತಿಗೆ ಕಾರಣರಾದರು. ಅವರು ಬದುಕಿರುವವರೆಗೆ ತಳ ಸಮುದಾಯದ ಜನರ ಶ್ರೇಯೋಭಿವೃದ್ಧಿಗೆ ದುಡಿದರು ಎಂದು ಸ್ಮರಿಸಿದರು.

ಕಾನೂನು ಸಚಿವರಾಗಿ, ದಕ್ಷಿಣ ಆಫ್ರಿಕಾದ ಸಂವಿಧಾನ ಸಮಿತಿ ಸದಸ್ಯರಾಗಿ. ರಾಜ್ಯಸಭಾ ಸದಸ್ಯರಾಗಿ, ದೇವರಾಜ ಅರಸು ಅವರ ಕಾಲದಲ್ಲಿ ವಿಧಾನ ಪರಿಷತ್ ಸದಸ್ಯರಾಗಿ, ಕಾನೂನು ಮಂತ್ರಿಯಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ಇಡೀ ರಾಜ್ಯದ ಜವಾಬ್ದಾರಿ ಹೊತ್ತು, ಎಲ್ಲಾ ವರ್ಗಗಳ ಏಳಿಗೆಗಾಗಿ ಶ್ರಮಿಸಿ ಕಾರ್ಯ ನಿಷ್ಠೆ ತೋರಿದ್ದಾರೆ. ಹಾವನೂರು ವರದಿ ಎಂಬ ಖ್ಯಾತಿ ಪಡೆದಿದ್ದ ಹಾವನೂರು ಅವರು ವಾಲ್ಮೀಕಿ ನಾಯಕ ಸಮುದಾಯದ ಕಣ್ಮಣಿಯಾಗಿದ್ದರು ಎಂದು ಹೇಳಿದರು.

ನಾಯಕ ಸಮಾಜದ ಮುಖಂಡ ಪಿ.ಆರ್. ಶಾಹು ಮಾತನಾಡಿ, ಹಿಂದುಳಿದ ಜನಾಂಗದ ಅಭಿವೃದ್ಧಿಗಾಗಿ ಸಮ ಸಮಾಜ ನಿರ್ಮಾಣದ ಕನಸು ಕಟ್ಟಿಕೊಂಡು ಮುನ್ನಡೆದ ಎಲ್.ಜಿ. ಹಾವನೂರು ಅವರು ಹಿಂದುಳಿದ ವರ್ಗದ ಮುಂಚೂಣಿಯ ನಾಯಕರಾಗಿದ್ದರು ಎಂದರು.

ಈ ಸಂದರ್ಭದಲ್ಲಿ ನಾಯಕ ಸಮಾಜದ ಯುವ ಮುಖಂಡ ಶ್ರೀನಿವಾಸ ದಾಸಕರಿಯಪ್ಪ, ಎನ್.ಎಂ. ಆಂಜನೇಯ ಗುರೂಜಿ, ಕೆ.ಆರ್. ಮಂಜುನಾಥ, ಹದಡಿ ಕುಮಾರ್, ಎಸ್.ಟಿ. ರವಿ, ವಸಂತ್‌ಕುಮಾರ್, ರಾಜುನಾಯ್ಕ, ಪ್ರಮೋದ್‌ಕುಮಾರ್, ಪೈಲ್ವಾನ್ ಬಸವರಾಜ್ ಸೇರಿದಂತೆ ಇತರರು ಇದ್ದರು.

# ರಾಜೀವ್ ವಿವಿಗೆ ಡಾ|| ಪ್ರಸಾದ್

**(1ನೇ ಪುಟದಿಂದ)** ನೇಮಕ ಮಾಡಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳು ಆದೇಶಿಸಿದ್ದಾರೆ.

ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಯೂ ಆದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಎಸ್. ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷರೂ ಆದ ಮಾಜಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಡಾ. ಪ್ರಸಾದ್ ಅವರನ್ನು ಅಭಿನಂದಿಸಿದ್ದಾರೆ.

# ನಂದಿಗುಡಿ : ನೂತನ 'ಗುರು ನಿವಾಸ' ಕಟ್ಟಲು ತೀರ್ಮಾನ



ಮಲೆಬೆನ್ನೂರು, ಮಾ.25- ನಂದಿಗುಡಿ ಬೃಹನ್ಮಠಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸೂಚನೆ ಮೇರೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಯಾಗಿರುವ 2 ಕೋಟಿ ರೂ. ವಿಶೇಷ ಅನುದಾನದಲ್ಲಿ 'ಗುರು ನಿವಾಸ' ಕಟ್ಟಲು ತೀರ್ಮಾನಿಸಲಾಯಿತು.

ಈ ಕುರಿತು ಚರ್ಚಿಸಲು ಶುಕ್ರವಾರ ನಂದಿಗುಡಿ ಮಠದಲ್ಲಿ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ನೇತೃತ್ವದಲ್ಲಿ ಕರೆದಿದ್ದ ಸಭೆಯಲ್ಲಿ ಸುದೀರ್ಘ ಚರ್ಚೆ ನಂತರ ನಂದೀಶ್ವರ ಪ್ರೌಢಶಾಲೆ ಬಳಿ ಇರುವ ವಿಶಾಲ ಜಾಗದಲ್ಲಿ ಮಠದ ನೂತನ ಕಟ್ಟಡ ಕಟ್ಟಲು ಎಲ್ಲರೂ ಒಪ್ಪಿಗೆ ನೀಡಿದರು.

ಸರ್ಕಾರದ ಹಣದಲ್ಲೇ ಕಾಮಗಾರಿ ಮುಗಿಯುವುದಿಲ್ಲ, ಭಕ್ತರೂ ಸಹ ಕೈ ಜೋಡಿಸುವಂತೆ ಶ್ರೀಗಳು ಮಾಡಿದ ಮನವಿಗೆ ಸಭೆಯಲ್ಲಿದ್ದವರು ನೆರವಿನ ಭರವಸೆ ನೀಡಿದರು. ದಾವಣಗೆರೆಯಲ್ಲಿರುವ ನಂದಿಗುಡಿ ಮಠದ ಹಾಸ್ಟೆಲ್ ಜಾಗದಲ್ಲಿ ನೂತನ ಹಾಸ್ಟೆಲ್ ಕಟ್ಟಡ ಹಾಗೂ ವಾಣಿಜ್ಯ ಮಳಿಗೆ ನಿರ್ಮಿಸುವ ಯೋಜನೆ ಶೀಘ್ರ ಪ್ರಾರಂಭವಾಗಲಿದೆ ಎಂದು ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಸಭೆಗೆ ತಿಳಿಸಿದರು.

ನೊಳಂಬ ವೀರಶೈವ ಸಂಘದ ಕೇಂದ್ರ ಸಮಿತಿ ನಿರ್ದೇಶಕರಾದ ಮಾಜಿ ಶಾಸಕ ಡಾ. ಡಿ.ಬಿ. ಗಂಗಪ್ಪ, ಸಿ.ಬಿ. ಈಶ್ವರಪ್ಪ, ಹಿರಿಯ ವೈದ್ಯರಾದ ಡಾ. ಸಾತೇನಹಳ್ಳಿ, ಡಾ. ಟಿ. ಬಸವರಾಜ್, ಮುಖಂಡರಾದ ಶಿಕಾರಿಪುರದ ಭೂಕಾಂತಪ್ಪ, ಮಹೇಂದ್ರ, ಗುರು, ಬ್ಯಾಡಗಿ ಪ್ರಭು, ಜಿಗಳಿಯ ಇಂದೂಧರ್, ಗೌಡ್ರ ಬಸವರಾಜಪ್ಪ, ಮಲೇಬೆನ್ನೂರಿನ ಎಂ. ಕರಿಬಸಯ್ಯ, ಬಿ.ವೀರಯ್ಯ, ವಾಸನದ ಬಸವ ರಾಜಪ್ಪ, ಹಳ್ಳಿಹಾಳ್ ಶಾಂತನಗೌಡ, ಪರಮೇಶ್ವರಪ್ಪ, ವೀರನಗೌಡ, ಜಿ. ಬೇವಿನಹಳ್ಳಿಯ ಬಂಡೇರ ತಿಮ್ಮಣ್ಣ, ಕೊಕ್ಕನೂರಿನ ಓ.ಬಿ. ನಿಂಗನಗೌಡ, ಕೆ.ಪಿ. ಆಂಜನೇಯ ಪಾಟೀಲ್, ಕೆ.ಬಿ. ರವಿ, ಅಭಿ, ಕೆ.ಎನ್.ಹಳ್ಳಿಯ ಕೆ.ಬಿ. ರವಿ ಉಪನ್ಯಾಸಕ ಡಾ. ರಾಕೇಶ್ ಮತ್ತು ಇತರರು ಸಭೆಯಲ್ಲಿ ಭಾಗವಹಿಸಿದ್ದರು.

# ಭಾವನೆಗಳು ಬೆಳೆಯುತ್ತಿಲ್ಲ

**(4ನೇ ಪುಟದಿಂದ)** ಧರಿಸುವ ಪೇಟಾ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿರುವುದು ಶೋಭೆ ತರಲಾರದು. ಅದು ಹಿಂದೂ ಸಂಸ್ಕೃತಿಯ ತ್ಯಾಗ, ಔದಾರ್ಯದ ಪ್ರತೀಕವಾಗಿದೆ. ಕೆಲ ಸಮುದಾಯದವರ ಹಿತ ಬಯಸಲು ಹೋಗಿ, ಇನ್ನೊಬ್ಬರಿಗೆ ಸಲ್ಲದ ಮಾತನ್ನಾಡುವುದು ಒಳ್ಳೆಯದಲ್ಲ. ಆಗಾಗ್ಗೆ ಇಂಥ ಹೇಳಿಕೆಗಳನ್ನು ಕೊಡುವುದರಿಂದ ಅವರ ಜವಾಬ್ದಾರಿ ಸ್ಥಾನಕ್ಕೆ ಹಾನಿ ಉಂಟಾಗದೇ ಇರಲಾರದು. ಮುಂದೆ ಇಂಥ ಮಾತುಗಳನ್ನಾಡುವುದು ಮಾಜಿ ಮುಖ್ಯ ಮಂತ್ರಿಗಳ ಘನತೆಗೆ ಧಕ್ಕೆ ಉಂಟಾದೀತೆಂದು ಕಿವಿ ಮಾತು ಹೇಳಿದರು.

ಶಾಸಕ ಪ್ರೊ. ಲಿಂಗಣ್ಣ ಧರ್ಮ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಎಲ್ಲ ಧರ್ಮಗಳಲ್ಲಿ ಇರುವ ಆದರ್ಶ ಚಿಂತನೆ ಅರಿತು ಆ ದಾರಿಯಲ್ಲಿ ನಡೆಯುವುದು ಜೀವನದ ಉನ್ನತಿಗೆ ಸಹಕಾರಿಯಾಗುತ್ತದೆ. ಪ್ರತಿಯೊಬ್ಬರೂ ಪರಸ್ಪರ ಸಾಮರಸ್ಯದಿಂದ ಬಾಳಬೇಕೆಂದರು.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿದ್ದರು. ದುಗ್ಗಾವತಿ ಉಭಯ ಶ್ರೀಗಳು, ರಾಂಪುರ ಹಾಲಸ್ವಾಮಿ ಶಿವಕುಮಾರ ಶ್ರೀಗಳು ಪಾಲ್ಗೊಂಡಿದ್ದರು.

ಸಮಾರಂಭಕ್ಕೂ ಮುನ್ನ ಶ್ರೀ ರಂಭಾಪುರಿ ಜಗದ್ಗುರುಗಳವರ ಬೆಳ್ಳಿ ಅಡ್ಡಪಲ್ಲಕ್ಕಿ ಮಹೋತ್ಸವ ಗ್ರಾಮದಲ್ಲಿ ಸಡಗರ, ಸಂಭ್ರಮದಿಂದ ಜರುಗಿತು. ಹಲವಾರು ಕಲಾ ತಂಡಗಳು, ಕುಂಭ ಹೊತ್ತ ಮಹಿಳೆಯರು, ಆರತಿ ಹಿಡಿದ ಮುತ್ತೈದೆಯರು ಉತ್ಸವಕ್ಕೆ ಮೆರಗು ತಂದರು.

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀಮತಿ ನಾಗವೇಣಿ ಕೋಂ ಲೇಟ್ ಹೆಚ್.ಎಲ್.ಮುರಳಿಧರ ಶೆಟ್ಟಿ, ವಯಸ್ಸು 63 ವರ್ಷ ಮತ್ತು ಶ್ರೀ ರಘುನಂದನ್ ಹೆಚ್.ಎಂ. ಗುಜ್ಜಾರ್ಲ್ ಬಿನ್ ಲೇಟ್ ಹೆಚ್.ಎಲ್.ಮುರಳಿಧರ ಶೆಟ್ಟಿ, ವಯಸ್ಸು 29 ವರ್ಷ, ವಾಸ : ಕೆ ಆರ್ ಮಾರ್ಕೆಟ್ ಹತ್ತಿರ, ಚೌಕಿಪೇಟೆ, ದಾವಣಗೆರೆ ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ : ಹರಿಹರ ನಗರದ, ಹಳೇ ಭರಂಪುರ, ಟಿ.ಬಿ. ರಸ್ತೆ, 108 ಲಿಂಗೇಶ್ವರ ದೇವಸ್ಥಾನದ ಹತ್ತಿರ, ನಂ: 104 : 105 ರ ವಾಸಿಗಳಾದ
ಲೇಟ್ ಗುತ್ಯಪ್ಪನವರ ಮಕ್ಕಳಾದ 1) ಶ್ವೇತಾ.ಎಸ್.ಜಿ 2)ಕಿರಣ್‌ಕುಮಾರ್.ಎಸ್.ಜಿ. 3)ಪೂಜಾ .ಎಸ್.ಜಿ. ಲೇಟ್ ನಿಂಗಪ್ಪನವರ ಮಕ್ಕಳಾದ 1) ಕರಿಯಪ್ಪ.ಎಸ್.ಎನ್, 2)ರೇಣುಕಮ್ಮ, 3)ಎಸ್.ಎನ್. ರಾಜಪ್ಪ ಲೇಟ್ ಮೈಲಪ್ಪನವರ ಮಕ್ಕಳಾದ 1) ಶೈಲಜಾ ಪಿ ಹರ್ಲಾಪುರ 2)ಗಾಯಿತ್ರಿ ಕ. ಮೆಣಸಿನಹಾಳ್, 3) ಗಣೇಶ್ ಪಾಸಿಗಾರ 4) ಅಶೋಕ್ ಎಂ, ಪಾಸಿಗಾರ 5) ಮಂಜು ಎಂ. ಪಾಸಿಗಾರ.
ರಾಜಪ್ಪ ಸೊಪ್ಪಿನವರ ಇವರ ಪತ್ನಿ ಹಾಗೂ ಮಕ್ಕಳಾದ 1) ಶ್ರೀಮತಿ ಲಕ್ಷ್ಮಿ ರಾಜಪ್ಪ ಸೊಪ್ಪಿನವರು 2) ವಾಣಿ ಎಸ್.ಆರ್ 3) ವರ್ಷಾ ಎಸ್. ಆರ್, ಮೈನರ್ ಗಾರ್ಡಿಯನ್ ತಾಯಿ ಲಕ್ಷ್ಮಿ ರಾಜಪ್ಪ ಸೊಪ್ಪಿನವರು ಎಸ್.ಎನ್.ಕರಿಯಪ್ಪ ಇವರ ಪತ್ನಿ ಹಾಗೂ ಮಕ್ಕಳಾದ 1) ಶ್ರೀಮತಿ ಸಾವಿತ್ರಮ್ಮ ಕೆ.ಎಸ್ 2) ಚಂದ್ರಕಲಾ ಕರಿಯಪ್ಪ ಸೊಪ್ಪಿನವರ, 3) ಭರತ್‌ಕುಮಾರ್ ಕರಿಯಪ್ಪ ಸೊಪ್ಪಿನವರ 4) ದೀಪಾ. ಕೆ.ಎಸ್ ಮೈನರ್ ಗಾರ್ಡಿಯನ್ ತಾಯಿ ಸಾವಿತ್ರಮ್ಮ ಕೆ.ಎಸ್. 5) ದಿಲೀಪ್ ಕುಮಾರ್ ಮೈನರ್ ಗಾರ್ಡಿಯನ್ ತಾಯಿ ಶ್ರೀಮತಿ ಸಾವಿತ್ರಮ್ಮ ಕೆ.ಎಸ್ ಇವರುಗಳು ಈ ಕೆಳಕಂಡ ಅನುಸೂಚಿಯಲ್ಲಿ ತೋರಿಸಿರುವ ಸೊತ್ತುಗಳ ಖಾತೆ, ಮತ್ತು ಹಕ್ಕುದಾರಿ ಸ್ವಾಧೀನಾನುಭವದಲ್ಲಿದ್ದು, ಸದರಿ ಷೆಡ್ಯೂಲ್ ಸೊತ್ತುಗಳನ್ನು ಮೇಲ್ಕಂಡವರಿಂದ ನಮ್ಮ ಕಕ್ಷಿದಾರರು ಶುದ್ಧ ಕ್ರಯಕ್ಕೆ ಖರೀದಿಸುವವರಿರುತ್ತಾರೆ. ಆದ್ದರಿಂದ ಷೆಡ್ಯೂಲ್ ಸೊತ್ತುಗಳ ಮೇಲೆ ಯಾರದೇ ತಂಟೆ ತಕರಾರುಗಳು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆಗಳು ಹೊಂದಿದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ ಹನ್ನೆರಡು ದಿನಗಳ (12 ದಿನಗಳ) ಒಳಗಾಗಿ ನನ್ನ ಕಕ್ಷಿದಾರರನ್ನಾಗಲೀ ಅಥವಾ ಕೆಳಕಂಡ ಅವರ ವಕೀಲರನ್ನಾಗಲೀ ಸೂಕ್ತ ದಾಖಲೆಗಳೊಂದಿಗೆ ಲಿಖಿತ ಮೂಲಕ ಸಂಪರ್ಕಿಸತಕ್ಕದ್ದು, ಒಂದು ವೇಳೆ ಹನ್ನೆರಡು ದಿನಗಳ ನಂತರ ಯಾವುದೇ ರೀತಿಯ ತಕರಾರುಗಳು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸೊತ್ತುಗಳನ್ನು ಬೇರೆ ಯಾವುದೇ ವ್ಯಕ್ತಿಗಳ ಹಕ್ಕು, ಹಿತಾಸಕ್ತಿಗೆ ಒಳಪಟ್ಟಿರುವುದಿಲ್ಲ ಎಂದು ಪರಿಗಣಿಸಿ, ನಮ್ಮ ಕಕ್ಷಿದಾರರ ಹೆಸರಿಗೆ ಶುದ್ಧ ಕ್ರಯ ಪತ್ರ ನೋಂದಣಿ ಮಾಡಿಸಿ ಕೊಳ್ಳುವರಿರುತ್ತಾರೆ. ಆ ನಂತರ ಬಂದ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ, ಮತ್ತು ಅಂತಹ ತಕರಾರುಗಳು ನಮ್ಮ ಕಕ್ಷಿದಾರರಿಗೆ ಬೈಂಡಿಂಗ್ ಆಗುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸಲಾಗಿದೆ.

**ಅನುಸೂಚಿ – 1 :** ಹರಿಹರ ತಾಲ್ಲೂಕು, ಸಬ್ ರಿಜಿಸ್ಟಾರ್ ರವರ ಅಧಿಕಾರಕ್ಕೆ ಒಳಪಟ್ಟ ಹರಿಹರ ತಾಲ್ಲೂಕು, ಕಸಬಾ ಹೋಬಳಿ, ಹನಗವಾಡಿ ಗ್ರಾಮದ ಸರ್ಕಾರಿ ರೀ. ಸರ್ವೆ ನಂ 22:11 ಪೂರಾ ವಿಸ್ತೀರ್ಣ ಎಕರೆ ಇಲ್ಲ, ಗುಂಟೆ 27 ಆಕಾರ ರೂ.0–24 ಪೈಸೆ ವುಳ್ಳ ಖುಷಿ ಜಮೀನಿಗೆ ಚಕ್ಕು ಬಂದಿಃ ಪೂರ್ವಕ್ಕೆ : ಯಲ್ಲಮ್ಮನವರ ಜಮೀನು ಪಶ್ಚಿಮಕ್ಕೆ : ಓಡಾಡಲುಬಿಟ್ಟಿರುವ ದಾರಿ ಉತ್ತರಕ್ಕೆ : ಎಸ್. ಕರಿಯಪ್ಪನವರ ಜಮೀನು, ದಕ್ಷಿಣಕ್ಕೆ : ರಸ್ತೆ.

**ಅನುಸೂಚಿ – 2 :** ಹರಿಹರ ತಾಲ್ಲೂಕು, ಸಬ್ ರಿಜಿಸ್ಟಾರ್ ರವರ ಅಧಿಕಾರಕ್ಕೆ ಒಳಪಟ್ಟ ಹರಿಹರ ತಾಲ್ಲೂಕು, ಕಸಬಾ ಹೋಬಳಿ, ಹನಗವಾಡಿ ಗ್ರಾಮದ ಸರ್ಕಾರಿ ರೀ. ಸರ್ವೆ ನಂ 22:12 ಪೂರಾ ವಿಸ್ತೀರ್ಣ ಎಕರೆ ಇಲ್ಲ, ಗುಂಟೆ 27 ಆಕಾರ ರೂ.0–24 ಪೈಸೆ ವುಳ್ಳ ಖುಷಿ ಜಮೀನಿಗೆ ಚಕ್ಕು ಬಂದಿಃ ಪೂರ್ವಕ್ಕೆ : ಬೀರಪ್ಪನವರ ಜಮೀನು ಪಶ್ಚಿಮಕ್ಕೆ : ಕರಿಯಪ್ಪನವರ ಜಮೀನು, ಉತ್ತರಕ್ಕೆ : ಗುತ್ಯಪ್ಪ ಎಸ್.ಎನ್ ಇವರ ಜಮೀನು, ದಕ್ಷಿಣಕ್ಕೆ : ಎಸ್.ಎನ್.ರಾಜಪ್ಪ ಇವರ ಜಮೀನು.

**ಅನುಸೂಚಿ – 3 :** ಹರಿಹರ ತಾಲ್ಲೂಕು, ಸಬ್ ರಿಜಿಸ್ಟಾರ್ ರವರ ಅಧಿಕಾರಕ್ಕೆ ಒಳಪಟ್ಟ ಹರಿಹರ ತಾಲ್ಲೂಕು, ಕಸಬಾ ಹೋಬಳಿ, ಹನಗವಾಡಿ ಗ್ರಾಮದ ಸರ್ಕಾರಿ ರೀ. ಸರ್ವೆ ನಂ 22:13 ಪೂರಾ ವಿಸ್ತೀರ್ಣ ಎಕರೆ ಇಲ್ಲ, ಗುಂಟೆ 26 ಆಕಾರ ರೂ.0–22 ಪೈಸೆ ವುಳ್ಳ ಖುಷಿ ಜಮೀನಿಗೆ ಚಕ್ಕು ಬಂದಿಃ ಪೂರ್ವಕ್ಕೆ : ಸಿ ಎನ್ ಈರಪ್ಪನವರ ಜಮೀನು ಪಶ್ಚಿಮಕ್ಕೆ : ಅಬ್ದುಲ್ ಖಲೀಲ್ ಸಾಬ್ ರವರ ಜಮೀನು, ಉತ್ತರಕ್ಕೆ : ಪ್ರಕಾಶ್ ಜ್ಯೂಯಲರ್ ಇವರ ಜಮೀನು ದಕ್ಷಿಣಕ್ಕೆ : ಛತ್ರದ ಹುಚ್ಚಪ್ಪನವರ ಜಮೀನು.

**ಅನುಸೂಚಿ – 4 :** ಹರಿಹರ ತಾಲ್ಲೂಕು, ಸಬ್ ರಿಜಿಸ್ಟಾರ್ ರವರ ಅಧಿಕಾರಕ್ಕೆ ಒಳಪಟ್ಟ ಹರಿಹರ ತಾಲ್ಲೂಕು, ಕಸಬಾ ಹೋಬಳಿ, ಹನಗವಾಡಿ ಗ್ರಾಮದ ಸರ್ಕಾರಿ ರೀ. ಸರ್ವೆ ನಂ 22:14 ಪೂರಾ ವಿಸ್ತೀರ್ಣ ಎಕರೆ ಒಂದು ಗುಂಟೆ ಇಲ್ಲ ಆಕಾರ ರೂ.0–35 ಪೈಸೆ ವುಳ್ಳ ಖುಷ್ಕಿ ಜಮೀನಿಗೆ ಚಕ್ಕು ಬಂದಿಃ ಪೂರ್ವಕ್ಕೆ : ತಳವಾರ ಕೆಂಪ್ಪನವರ ಜಮೀನು ಪಶ್ಚಿಮಕ್ಕೆ : ಕರಿಯಪ್ಪನವರ ಜಮೀನು, ಉತ್ತರಕ್ಕೆ : ಅಡಿವೆಪ್ಪ ಛತ್ರದ ಇವರ ಜಮೀನು, ದಕ್ಷಿಣಕ್ಕೆ : ಕೊಪ್ಪದ ಲಕ್ಷಣ ಇವರ ಜಮೀನು.

**ಸಂಪರ್ಕಿಸಬೇಕಾದ ವಿಳಾಸ : ಶ್ರೀ ಎಸ್. ಪ್ರಕಾಶ್, ವಕೀಲರು, ಡೋರ್ ನಂ: 559, 5ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ – 02 ಮೊಬೈಲ್ ನಂ: 9980329529.**

# ಮನುಷ್ಯನ ಬುದ್ಧಿ ಶಕ್ತಿ ಬೆಳೆದಷ್ಟು ಭಾವನೆಗಳು ಬೆಳೆಯುತ್ತಿಲ್ಲ

## ಹೂವಿನಮಡು ಗ್ರಾಮದಲ್ಲಿನ ಜನ ಜಾಗೃತಿ ಧರ್ಮ ಸಮಾರಂಭದಲ್ಲಿ ರಂಭಾಪುರಿ ಜಗದ್ಗುರುಗಳ ವ್ಯಾಕುಲತೆ



ದಾವಣಗೆರೆ, ಮಾ.25- ನಾಗರಿಕತೆಯ ಇಂದಿನ ಸಮಾಜದಲ್ಲಿ ಜಾತಿ ಸಂಘರ್ಷ ಹೆಚ್ಚುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಜಾತಿಗಿಂತ ಧರ್ಮ ದೊಡ್ಡದು, ಧರ್ಮಕ್ಕಿಂತ ದೇಶ ದೊಡ್ಡದು ಎಂದು ರಂಭಾಪುರಿ ಪೀಠದ ಜಗದ್ಗುರು ಶ್ರೀ ಡಾ. ವೀರಸೋಮೇಶ್ವರ ಸ್ವಾಮೀಜಿ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಹೂವಿನಮಡು ಗ್ರಾಮದಲ್ಲಿ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಮನುಷ್ಯನ ಬುದ್ಧಿ ಶಕ್ತಿ ಬೆಳೆದಷ್ಟು ಭಾವನೆಗಳು ಬೆಳೆಯುತ್ತಿಲ್ಲ. ಧರ್ಮಕ್ಷೇತ್ರ ಮೊದಲ್ಗೊಂಡು ಎಲ್ಲಾ ರಂಗಗಳಲ್ಲಿ ಕಲುಷಿತ ವಾತಾವರಣ ನಿರ್ಮಾಣ ಗೊಳ್ಳುತ್ತಿರುವುದು ಆರೋಗ್ಯಕರ ಸಮಾಜಕ್ಕೆ ಮಾರಕವಾಗಿದೆ. ಸಾಮರಸ್ಯ ಬೆಳೆದು ಬರಲು ಸಂಸ್ಕಾರ, ಸಂಸ್ಕೃತಿಯ ಆಚರಣೆ ಮುಖ್ಯ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮೌಲ್ಯಾಧಾರಿತ ತತ್ವ, ಚಿಂತನೆಗಳನ್ನು ಅರುಹಿ, ಸಕಲರನ್ನು ಉದ್ಧರಿಸಿದ್ದಾರೆ. ಅವರ ಅಮೂಲ್ಯ ವಿಚಾರ ಧಾರೆ ಬದುಕಿ ಬಾಳುವ ಜನಾಂಗಕ್ಕೆ ಸನ್ಮಾರ್ಗದ ದರ್ಶನ ನೀಡುತ್ತವೆ. ಇದೇ ದಾರಿಯಲ್ಲಿ ಶರಣರು ನಡೆದು ಸಕಲ ಜನಾಂಗಕ್ಕೂ ಒಳಿತನ್ನು ಉಂಟು ಮಾಡಿದರೆಂದರು.

**ಖಂಡನೆ :** ಹಿಜಾಬ್ ಹಿನ್ನೆಲೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ಅವರು ಸ್ವಾಮಿಗಳು (3ನೇ ಪುಟಕ್ಕೆ)

# ಪಂಚಾಯ್ತಿ ಹೊರ ಗುತ್ತಿಗೆ ನೌಕರರಿಗೆ ನೇರ ವೇತನವಿಲ್ಲ

ಬೆಂಗಳೂರು, ಮಾ. 25 - ಪುರಸಭೆ, ಪಟ್ಟಣ ಪಂಚಾಯತ್ ಹಾಗೂ ನಗರಸಭೆಗಳಲ್ಲಿ ಹೊರ ಗುತ್ತಿಗೆ ಮೂಲಕ ನೇಮಕ ಮಾಡಿಕೊಂಡ ನೌಕರರಿಗೆ ನೇರ ವೇತನ ನೀಡಲು ಅವಕಾಶವಿಲ್ಲ ಎಂದು ಎಂ.ಟಿ.ಬಿ. ನಾಗರಾಜ್ ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಅಜಯ್ ಧರ್ಮಸಿಂಗ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ವೇತನವನ್ನು ತೆರಿಗೆ ಹಣದಲ್ಲಿ ಹಾಗೂ ಎಸ್‌ಎಫ್‌ಸಿಎಫ್ ಅನುದಾನದಲ್ಲಿ ನೀಡಬಹುದಾಗಿದೆ. ಮಂಜೂರಾದ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾದ ಹೊರಗುತ್ತಿಗೆ ನೌಕರರಿಗೆ ನೇರ ವೇತನ ಪಾವತಿ ಬಗ್ಗೆ ಪರಿಶೀಲಿಸಲಾಗುವುದು ಎಂದರು.

10 ಸಾವಿರದಿಂದ 20 ಸಾವಿರ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯತ್‌ಗಳಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಬಂಡೆಪ್ಪ ಕಾಶೆಂಪುರ್ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಜಿಲ್ಲಾಧಿಕಾರಿಗಳಿಂದ ಗ್ರಾಮ ಪಂಚಾಯತ್ ಅನ್ನು ಪಟ್ಟಣ ಪಂಚಾಯತ್ ಆಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಬರಬೇಕು. ಅಂತಹ ಪ್ರಸ್ತಾವನೆಗಳನ್ನು ಅಧಿಸೂಚನೆ ಹೊರಡಿಸುವ ಮೂಲಕ ಮೇಲ್ದರ್ಜೆಗೇರಿಸಲಾಗುವುದು ಎಂದರು.

ರಾಜ್ಯದ ಗ್ರಾಮ ಪಂಚಾಯತ್‌ಗಳನ್ನು ಈ ರೀತಿ ಮೇಲ್ದರ್ಜೆಗೇರಿಸಲು ಜೂನ್ 30ರವರೆಗೂ ಅವಕಾಶವಿದೆ ಎಂದರು.

# ಚಿನ್ನದ ಪದಕ ಪಡೆದ ಮಮತಾ



ರಾಣೇಬೆನ್ನೂರು, ಮಾ. 25- ನಗರದ ಎಸ್.ಎಸ್.ಮಮತಾ ದಾವಣಗೆರೆ ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವ ದಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಮಮತಾ, ಎಂ.ಎ. ಇತಿಹಾಸ ಮತ್ತು ಪುರಾತತ್ವ ವಿಷಯದಲ್ಲಿ ಪ್ರಥಮ ರ್‍ಯಾಂಕ್ ನೊಂದಿಗೆ ಒಂದು ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ. ಗುರುವಾರ ನಡೆದ ಘಟಿಕೋತ್ಸವದಲ್ಲಿ ರಾಜ್ಯಪಾಲರು ಚಿನ್ನದ ಪದಕ ಪ್ರಧಾನ ಮಾಡಿದರು.

# ನೇಕಾರರ ಗಣತಿ ಕಾರ್ಯ ಆರಂಭ

ದಾವಣಗೆರೆ, ಮಾ.25- ಜಿಲ್ಲೆಯಲ್ಲಿ ವಿದ್ಯುತ್ ಮಗ್ಗ ನೇಕಾರರ ಹಾಗೂ ಮಗ್ಗ ಪೂರ್ವ ಚಟುವಟಿಕೆಗಳಲ್ಲಿ ತೊಡಗಿರುವ ಕೆಲಸಗಾರರ ಗಣತಿ ಹಾಗೂ ಘಟಕಗಳ ಸಮೀಕ್ಷೆಯನ್ನು ನವದೆಹಲಿಯ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಂಸ್ಥೆಯ ಮೂಲಕ ಆರಂಭಿಸಲಾಗಿದೆ. ಗಣತಿ ಹಾಗೂ ಸಮೀಕ್ಷೆಗೆ ನೋಂದಣಿ ಮಾಡಿಕೊಳ್ಳಲು ಈ ಸಂಸ್ಥೆಯವರು ಜವಳಿ ಘಟಕಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ಸಮೀಕ್ಷೆಯ ನೋಂದಣಿ ಕಾರ್ಯಕ್ಕೆ ನೇಕಾರರು ಸಹಕರಿಸಬೇಕು. ಮಾಹಿತಿಗಾಗಿ ದಾವಣಗೆರೆ ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕರ ಕಚೇರಿ ಹಾಗೂ ದೂ.ಸಂ: 08192-262362ಗೆ ಸಂಪರ್ಕಿಸಬಹುದು.

# ನಾಳೆ ಸಚಿವ ಭೈರತಿ ಬಸವರಾಜ ಪ್ರವಾಸ



ದಾವಣಗೆರೆ, ಮಾ.25- ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ್ ಅವರು ನಾಡಿದ್ದು 27 ರ ಭಾನುವಾರ ಮಧ್ಯಾಹ್ನ 12 ಕ್ಕೆ ಹರಿಹರ ತಾಲ್ಲೂಕು ಬೆಳ್ಳೂಡಿಯ ಕನಕ ಗುರುಪೀಠದ 6ನೇ ವಾರ್ಷಿಕೋತ್ಸವ ಹಾಗೂ ಕನಕ ಜಯಂತ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸುವರು.



# ಗದಗ - ಹೊನ್ನಾಳಿ ರಸ್ತೆ ವಿಸ್ತರಣೆ

ಗದಗ - ಹೊನ್ನಾಳಿ ಮಾರ್ಗದ ರಸ್ತೆ ವಿಸ್ತರಣೆ ಕಾಮಗಾರಿ ಭರದಿಂದ ಸಾಗುತ್ತಿದ್ದು, ಗುರುವಾರ ಜೆಸಿಬಿ ಯಂತ್ರದ ಸಹಾಯದಿಂದ ಹೊನ್ನಾಳಿ ತಾಲ್ಲೂಕಿನ ಕೊನಾಯಕನಹಳ್ಳಿ ಗ್ರಾಮದ ಬಳಿ ರಸ್ತೆ ಬದಿಯ ಸ್ವಚ್ಛತಾ ಕಾರ್ಯ ನಡೆಯುತ್ತಿರುವ ದೃಶ್ಯ.



30% ಡಿಸ್ಕೌಂಟ್
ನಿಮ್ಮ ನೆಚ್ಚಿನ ಪುರುಷರ ರೆಡಿಮೇಡ್ ಶೋ ರೂಮ್
Adding Colors To Your Life
Readymade for Gents
96205 97214
# 6, Scout Hall Complex, Beside Vodafone Store, Janatha Bazaar Road, PJ Extension, DAVANGERE-2

CHETANA OLYMPIAD SCHOOL
18th Cross, Anjaneya Badavane, DAVANAGERE
WANTED
Candidates who are dynamic, committed to their profession, proficient in the subject (s) are eligible to apply for any of the following posts:

| Position | Minimum Qualification | Experience |
|---|---|---|
| Montessori Educators | Diploma in Montessori Teacher Training Course | 5 years |
| Pre-Primary Educators | Graduate with NTT | 2 years |
| Primary Educators | Graduate with B.Ed | 3 years |
| Residential Tutors Maths, Physics, Chemistry, Biology & English | B.Sc., B.Ed / M.Sc. | Fresh/ Experienced |
| Physical Instructors | B.P.Ed / M.P.Ed | 5 years |
| TGT / PGT's Social, Mathematics, Science, English & Hindi | B.A, B.Ed / B.Sc., B.Ed / MA / M.Sc. | 5 years |
| Academic Co-ordinator | Post Graduation with B.Ed / M.Ed Experience in CBSE school. | 8 years |
| Administrative Co-ordinator | Post-Graduation with good administrative and communication skills | 8 years |
| Librarian | B.Lib.Sc. / M.Lib.Sc. | 2 years |
| Hostel Wardens | Any Graduate (Fresh/Experienced) | |

INTERVIEW DATES : 27-03-2022 & 03-04-2022
TIME : 9.00 a.m. to 2.00 p.m.
VENUE : CHETANA OLYMPIAD SCHOOL Anjaneya Badavane, 18th Cross Davanagere
Phone : 9900071206, Email: juniorolympiadschool@gmail.com

ದಾವಣಗೆರೆ ಜಿಲ್ಲಾ 11ನೇ ಕನ್ನಡ ಸಾಹಿತ್ಯ ಸಮ್ಮೇಳನ
ದಿನಾಂಕ 26.03.2022 ಮತ್ತು 27.03.2022.
ಸ್ಥಳ : ಜಗಳೂರು ರಸ್ತೆ, ಎಲೆಬೇತೂರು, ದಾವಣಗೆರೆ ತಾಲ್ಲೂಕು.

ಸಮ್ಮೇಳನದ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸುತ್ತಿರುವ
ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ತರಳಬಾಳು ಜಗದ್ಗುರು
ಶ್ರೀ ಶ್ರೀ ಶ್ರೀ 1108 ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರಿಗೆ
ಭಕ್ತಿ ಪೂರ್ವಕ ಸುಸ್ವಾಗತ...
ಎರಡು ದಿನಗಳ ಸಮ್ಮೇಳನಕ್ಕೆ ಆಗಮಿಸುತ್ತಿರುವ ಗಣ್ಯರಿಗೂ, ಅತಿಥಿಗಳಿಗೂ, ಸಾರ್ವಜನಿಕರಿಗೂ, ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರಿಗೂ
ಸ್ವಾಗತ... ಸುಸ್ವಾಗತ...
ಡಾ|| ಬಿ.ಟಿ. ಸಿದ್ದಪ್ಪ
ಅಧ್ಯಕ್ಷರು, ರಾಷ್ಟ್ರೀಯ ಗೋವು ಸೇವಾ ಸಂಘ, ಕರ್ನಾಟಕ ರಾಜ್ಯ ಘಟಕ
ಅಧ್ಯಕ್ಷರು, ತಿರುಮಲ-ತಿರುಪತಿ (TTD) ದಾಸ ಸಾಹಿತ್ಯ ಪ್ರಾಜೆಕ್ಟ್,
ದಾವಣಗೆರೆ ಜಿಲ್ಲಾ ಬಿಜೆಪಿ ಮುಖಂಡರು ಮಾಯಕೊಂಡ ವಿಧಾನಸಭಾ ಕ್ಷೇತ್ರ
ಶ್ಯಾಮ್ ಜಿ.ಎಸ್.
ಬಿಜೆಪಿ ಮುಖಂಡರು, ಮಾಯಕೊಂಡ ವಿಧಾನಸಭಾ ಕ್ಷೇತ್ರ

ಹುಟ್ಟುಹಬ್ಬದ ಶುಭಾಶಯಗಳು

ಇಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಆತ್ಮೀಯ ಸ್ನೇಹಿತ, ಎಸ್.ಎಸ್.ಎಸ್. ಎಂಟರ್‌ಪ್ರೈಸಸ್ ಮಾಲೀಕರಾದ
ಶ್ರೀಯುತ ಅಜೀರ್ ಪಠಾಣ್
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ಶುಭ ಕೋರುವವರು :
✦ ಹೆಚ್. ದಿವಾಕರ್, ಸಂಚಾಲಕರು, ದಾವಣಗೆರೆ ಜಿಲ್ಲಾ ಕಾನೂನು ಪ್ರಕೋಷ್ಠ ಹಾಗೂ ನಿಕಟಪೂರ್ವ ಉಪಾಧ್ಯಕ್ಷರು, ದಾವಣಗೆರೆ ಜಿಲ್ಲಾ ವಕೀಲರ ಸಂಘ
✦ ಎ.ಸಿ. ರಾಘವೇಂದ್ರ, ವಕೀಲರು ಮತ್ತು ರಾಜ್ಯ ಸಮಿತಿ ಸದಸ್ಯರು, ಕಾನೂನು ಪ್ರಕೋಷ್ಠ
✦ ಎಲ್. ದಯಾನಂದ, ವಕೀಲರು ಮತ್ತು ಜಿಲ್ಲಾಧ್ಯಕ್ಷರು, ಅಧಿವ್ಯಕ್ತ ಪರಿಷತ್, ದಾವಣಗೆರೆ.
✦ ಜೆ.ಎಸ್. ಹೊನ್ನಪ್ಪ ✦ ಎ.ಎಸ್. ಮಂಜುನಾಥ ವಕೀಲರು, ಸಂಚಾಲರು, ಕಾನೂನು ಪ್ರಕೋಷ್ಠ, ದಕ್ಷಿಣ ಮಂಡಲ
✦ ಕಿರಣ್‌ಕುಮಾರ್ ಸುರ್ವೆ ✦ ಆಲೂರು ಪ್ರಕಾಶ್ ✦ ತಿರುಮಲ್ಲೇಶ್ ✦ ಡಿ.ಎಸ್. ಶಿವಶಂಕರಪ್ಪ
✦ ನೀಲಕಂಠಯ್ಯ ನೋಟರಿ ✦ ಟಿ.ಎನ್. ಕಿರಣ್ ✦ ಸಿದ್ದು, ಸಾಯಿನಿಧಿ ಕಮ್ಯೂನಿಕೇಷನ್ ✦ ರಮೇಶ್
✦ ರಾಜೀವ್, ಹೆಚ್‌ಡಿಎಫ್‌ಸಿ ಬ್ಯಾಂಕ್ ✦ ಪಿ.ವಿ. ಶಿವಕುಮಾರ್ ✦ ಕಿಶೋರ್ ✦ ಆದಿ ಸುಬ್ರಮಣ್ಯ ✦ ಆದರ್ಶ್ ✦ ಸನಾ ✦ ಸಾನಿಯಾ ✦ ತತ್ವ

|| ಶ್ರೀ ಬಸವೇಶ್ವರ ಪ್ರಸನ್ನ ||
ಕೈಲಾಸ ಶಿವಗಣಾರಾಧನೆ ಆಹ್ವಾನ

ಶ್ರೀಮತಿ ವಿಶಾಲಾಕ್ಷಿ ಪಾಟೀಲ್
ಶಿಸ್ತು ಮತ್ತು ಸಂಸ್ಕಾರವನ್ನು ಹೊಂದಿ, ಮೃದು ಮನಸ್ಸು ಮತ್ತು ಅಖಂಡ ಮನೋಸ್ಥೈರ್ಯದ ಮೂರ್ತಿಯಾಗಿ ಸದಾಕಾಲ ಎಲ್ಲರಿಗೂ ಒಳ್ಳೆಯದನ್ನೇ ಬಯಸುತ್ತಾ ಜೀವನವನ್ನು ನಡೆಸಿದ ನಮ್ಮ ಪೂಜ್ಯ ಮಾತೃಶ್ರೀ ಅವರು 14.03.2022 ರಂದು ಶಿವಸಾಯುಜ್ಯವನ್ನು ಹೊಂದಿರುತ್ತಾರೆ. ಅವರ ಮತ್ತು
ನಮ್ಮ ಪೂಜ್ಯ ತಂದೆ ಶ್ರೀ ಕಶೆಟ್ಟಿಹಳ್ಳಿ ಪಾಟೀಲ್ ತಿಪ್ಪಣ್ಣನವರ
ಬದುಕು ಮತ್ತು ಆಶೀರ್ವಾದ ನಮಗೆ ಸದಾಕಾಲಕ್ಕೂ ದಾರಿ ದೀಪವಾಗಿರುತ್ತದೆ. ನಮ್ಮ ಪೂಜ್ಯ ಮಾತೃಶ್ರೀ ಅವರ
'ಶಿವಗಣಾರಾಧನೆ'ಯನ್ನು
ದಿನಾಂಕ : 26.03.2022 ರ ಮಧ್ಯಾಹ್ನ 12.00ಕ್ಕೆ ಸ್ಥಳ : ಡಾ|| ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳ ಹಿರೇಮಠ, 2651, 2ನೇ ಅಡ್ಡ ರಸ್ತೆ, ಎಂ.ಸಿ.ಸಿ. ಬಿ ಬ್ಲಾಕ್, ವಾಟರ್ ಟ್ಯಾಂಕ್ ಹತ್ತಿರ, ದಾವಣಗೆರೆಯಲ್ಲಿ ನಡೆಸಲಾಗುತ್ತದೆ. ತಾವೆಲ್ಲರೂ ದಯವಿಟ್ಟು ಆಗಮಿಸಿ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತ ಕುಟುಂಬದವರು :
ಶ್ರೀಮತಿ ಸಪ್ನಾ ಪಾಟೀಲ್ ಮತ್ತು ಶ್ರೀ ಬಸವರಾಜ್ ಪಾಟೀಲ್, ಯು.ಎಸ್.ಎ.
ಶ್ರೀಮತಿ ಆಶಾ ಪಾಟೀಲ್ ಮತ್ತು ಶ್ರೀ ಉಮಕಾಂತ್ ಸಿದ್ದಪ್ಪ, ಬೆಂಗಳೂರು.
ಮೊಮ್ಮಕ್ಕಳು:ಶ್ರೇಯ ಪಾಟೀಲ್, ನಂದಿತಾ ಪಾಟೀಲ್, ಅಜಯ್, ಉಮಾಕಾಂತ್, ಮುಂಡರಗಿ ವಂಶಸ್ಥರು, ದಾವಣಗೆರೆ, ಕಶೆಟ್ಟಿಹಳ್ಳಿ ವಂಶಸ್ಥರು, ಬಂಧು-ಮಿತ್ರರು
ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

ಹೃದಯ ಪೂರ್ವಕ ಕೃತಜ್ಞತೆಗಳು


ಹರಿಹರ ನಗರದ ನಗರಸಭೆಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗುವುದಕ್ಕೆ ನನಗೆ ಸಹಕಾರ ನೀಡಿದ ಶಾಸಕ ಎಸ್. ರಾಮಪ್ಪ ನವರಿಗೆ
ಮಾಜಿ ಶಾಸಕರಾದ ಹೆಚ್. ಎಸ್. ಶಿವಶಂಕರ್ ರವರಿಗೆ
ಮತ್ತು ನಗರಸಭೆಯ ಎಲ್ಲಾ ಸದಸ್ಯರಿಗೆ, 24 ನೇ ವಾರ್ಡ್ ಬೆಂಕಿನಗರದ ಎಲ್ಲಾ ಮತದಾರರಿಗೆ ಹಾಗೂ ಅಧಿಕಾರಿಗಳಿಗೆ
ಹೃದಯ ಪೂರ್ವಕ ಕೃತಜ್ಞತೆಗಳು...
ಷಾಹಿನಾಬಾನು ದಾದಾಪೀರ್ ಭಾನುವಳ್ಳಿ
ಅಧ್ಯಕ್ಷರು, ನಗರಸಭೆ ಹರಿಹರ

ಪುಣ್ಯಸ್ಮರಣೆ

ಲಿಂ|| ಎನ್.ಕೆ. ನಾಗಪ್ಪನವರು
ಜನನ: 24.3.1930 ಮರಣ : 26.3.1997
ನೀವು ಇಲ್ಲದೆ ಜರುಗಿದ 25 ವರ್ಷ, ಬೇವು ತುಂಬಿ ಮರುಗಿದೆ ಮನೆಯ ಹರ್ಷ

ಲಿಂ|| ಎನ್.ಕೆ. ನಾಗಮ್ಮನವರು
ಜನನ: 10.3.1935 ಮರಣ 26.01.2015
ನೀವು ಇಲ್ಲದೇ ಜರುಗಿದ 7ವರ್ಷ, ಬೇವು ತುಂಬಿ ಮರುಗಿದೆ ಮನೆಯ ಹರ್ಷ
ನೀವು ಸದಾ ನಮ್ಮ ಅಂತರಂಗದಲ್ಲಿ ನಮ್ಮೊಂದಿಗೆ ಇದ್ದೀರಿ
ನಿಮ್ಮ ಸ್ಮರಣೆಯಲ್ಲಿ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.
ಶ್ರೀಮತಿ ಸರೋಜ ಶ್ರೀ ಎನ್.ಕೆ. ನಿಜಲಿಂಗಪ್ಪ ಮತ್ತು ಮಕ್ಕಳು, ದಾವಣಗೆರೆ.
ಶ್ರೀಮತಿ ನಳಿನಿ ಶ್ರೀ ಎನ್.ಕೆ. ಬಕ್ಕೇಶಪ್ಪ ಮತ್ತು ಮಕ್ಕಳು, ದಾವಣಗೆರೆ.
ಶ್ರೀಮತಿ ಅಕ್ಕಮಹಾದೇವಿ ಕೆ. ನೀಲಕಂಠಪ್ಪ, ಮತ್ತು ಮಕ್ಕಳು, ಬೆಂಗಳೂರು.
ಶ್ರೀಮತಿ ಸುಜಾತ ಡಿ.ಪಿ. ಸಿದ್ದಪ್ಪ ಮತ್ತು ಮಕ್ಕಳು, ನ್ಯಾಮತಿ.
ಶ್ರೀಮತಿ ಶೋಭ ಬಸವರಾಜ್ ನಲವಾಡ ಮತ್ತು ಮಕ್ಕಳು, ಕೊಪ್ಪಳ

WALK IN INTERVIEW
One of the leading finance institution in Davangere. Requires following personnel
ACCOUNTANT
Qualification :
B.com / M.com / MBA Finance
Experience : 3 years in Accounts
(Well versed in Tally & MS Excel)
Job Loication : Davangere.
Interested Candidates Can Directly attend the Interview On 27th March 2022 (10.30 AM Onwards) or email their profies to hr@rhr.group or call or whatsApp : 85508 33300, 63665 31119
Venue
RHR NIDHI LIMITED
Gold Loan, Recurring Deposit (RD), Fixed Deposit (FD), SB account (SB)
08192 232182 6366531117-118
rhrnidhilimited@gmail.com


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte